ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 2 | ಸಂಚಿಕೆ 23 | ಜೂನ್ 8, 1980 | ಬೆಲೆ : 50 ಪೈಸೆ

ಚುನಾವಣಾ ಫಲಿತಾಂಶ

ಒಂಬತ್ತು ರಾಜ್ಯಗಳ ಶಾಸನಸಭಾ ಚುನಾವಣಾ ಫಲಿತಾಂಶ ಈಗ ಪ್ರಕಟವಾಗಿದ್ದು ಇಂದಿರಾ ಕಾಂಗ್ರೆಸ್ಸಿಗೆ ಎಂಟು ರಾಜ್ಯಗಳಲ್ಲಿ ಬಹುಮತ ದೊರಕಿದೆ. ತಮಿಳುನಾಡಿನಲ್ಲಿ ಎ.ಐ.ಡಿ.ಎಂ.ಕೆ., ಸಿ.ಪಿ.ಎಂ., ಸಿ.ಪಿ.ಐ. ರಂಗಕ್ಕೆ ಬಹುಮತ ದೊರೆತು ಡಿ.ಎಂ.ಕೆ–ಇಂದಿರಾ ಕಾಂಗ್ರೆಸ್ ಕೂಟ ಸಂಪೂರ್ಣ ಸೋತಿದೆ. ಪಂಜಾಬ್‌ನಲ್ಲಿ ಕಾಂಗ್ರೆಗೆ ಬಹುಮತವಿದ್ದರೂ ಅಕಾಲಿದಳ, ಸಿ.ಪಿ.ಎಂ., ಸಿ.ಪಿ.ಐ. ರಂಗವು ಉತ್ತಮ ಫಲಿತಾಂಶ ಪಡೆದಿದೆ.

ಈವರೆಗೆ ಪ್ರಕಟವಾದ ಫಲಿತಾಂಶದಂತೆ ಬಿಹಾರ್‌ನಲ್ಲಿ ಕಾಂಗ್ರೆಗೆ ಸ್ಪಷ್ಟ ಬಹುಮತ ಬಂದಿಲ್ಲ. ಆದರೂ ಕಾಂಗ್ರೆ ಮಂತ್ರಿಮಂಡಲದ ರಚನೆಯಾಗುವುದು ಖಂಡಿತ.

ಈ ಸಲದ ಚುನಾವಣೆಯಲ್ಲಿ ಕಂಡುಬಂದ ಒಂದೆರಡು ಅಂಶಗಳನ್ನು ಗಮನಿಸುವುದು ಅಗತ್ಯ. ಮೊದಲನೆಯದಾಗಿ, ಕಾಂಗ್ರೆಗೆ ಎಂಟು ರಾಜ್ಯಗಳಲ್ಲಿ ಬಹುಸಂಖ್ಯಾತ ಸ್ಥಾನಗಳು ದೊರೆತರೂ ಅದಕ್ಕೆ ದೊರೆತ ಮತಗಳ ಪ್ರಮಾಣ ಶೇ. 50 ಕ್ಕಿಂತಲೂ ಕಡಿಮೆ. ಅಲ್ಪಮತದಿಂದ ಬಹುಸಂಖ್ಯಾತ ಸ್ಥಾನಗಳನ್ನು ಪಡೆದಿದೆ. ಇದು ಹಿಂದಿನಿಂದಲೂ ಹೀಗೆಯೇ ನಡೆದಿದೆ. ಇದೊಂದು ಈದಿನ ಚುನಾವಣಾ ಪದ್ಧತಿಯ ವೈಖರಿ. ಲೋಕಸಭಾ ಚುನಾವಣೆಯಲ್ಲಿ ಶೇ.42.30 ರಷ್ಟು ಮತಗಳನ್ನು ಪಡೆದು ಶೇ. 70ರಷ್ಟು ಸ್ಥಾನಗಳನ್ನು ಗಿಟ್ಟಿಸಿದ ಕಾಂಗ್ರೆ

ಸಂಪಾದಕೀಯ

ಈ ಸಲ ಇನ್ನೂ ಕಡಿಮೆ ಓಟುಗಳಿಂದ ಅತ್ಯಧಿಕ ಸ್ಥಾನಗಳನ್ನು ಪಡೆದಿದೆ. ಈ ಸಲ ಚುನಾವಣೆಯಲ್ಲಿ ಹಿಂದಿಗಿಂತ ಕಡಿಮೆ ಮತದಾನ ನಡೆದಿರುವುದೂ ಗಮನಾರ್ಹ.

ಎರಡನೆಯದಾಗಿ, ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳು ಒಂದಾಗಿದ್ದ ರಾಜ್ಯಗಳಲ್ಲಿ ಕಾಂಗ್ರೆಯನ್ನು ಯಶಸ್ವಿಯಾಗಿ ಎದುರಿಸಲು ಸಾಧ್ಯವಾಗಿರುವುದು ಸ್ಪಷ್ಟವಾಗಿದೆ. ಉದಾಹರಣೆಗೆ ತಮಿಳುನಾಡಿದಲ್ಲಿ ದೊರೆತ ಜಯವೇ ಇದಕ್ಕೆ ಸಾಕ್ಷಿ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಮೊದಲಿಂದಲೂ ಎಲ್ಲ ಎಡ ಮತ್ತು ಪ್ರಜಾಪ್ರಭುತ್ವವಾದಿ ಪಕ್ಷಗಳ ಐಕ್ಯತೆಗೆ ಪ್ರಯತ್ನ ನಡೆಸಿದ್ದರೂ ಅದು ಸಫಲವಾಗಲಿಲ್ಲ. ನಾಮಪತ್ರಗಳನ್ನು ಸಲ್ಲಿಸಿದ ನಂತರವೂ ಸಹ ಈ ಐಕ್ಯತೆಗೆ ಕರೆ ನೀಡಿತು. ಆದರೆ ತಮಿಳುನಾಡಿನಲ್ಲಿ ಎ.ಐ.ಡಿ.ಎಂ.ಕೆ. ಜೊತೆಗೂ, ಮಹಾರಾಷ್ಟ್ರದಲ್ಲಿ ಜನತಾ ಜೊತೆಗೂ, ಪಂಜಾಬಿನಲ್ಲಿ ಅಕಾಲಿ ಪಾರ್ಟಿಯೊಂದಿಗೂ, ಮಾತ್ರ ಒಕ್ಕೂಟ ರಚನೆ ಮಾಡಲು ಸಾಧ್ಯವಾಯಿತು. ಆದರೆ ಜನತಾ, ಲೋಕದಳ, ಅರಸು ಕಾಂಗ್ರೆಸ್ ಪಕ್ಷಗಳೊಂದಿಗೆ ಒಪ್ಪಂದವಾಗಿದ್ದರೆ ಪರಿಸ್ಥಿತಿ

(ಕೊನೆಯ ಪುಟ ನೋಡಿ)

ಗಡೀಪಾರು ಮಾಡಲು ಮತ್ತೊಂದು ಕ್ರಮ

ಸಿ. ಐ. ಟಿ. ಯು. ಕರ್ನಾಟಕ ರಾಜ್ಯಸಮಿತಿಯ ಅಧ್ಯಕ್ಷ ಹಾಗೂ ಮೈಕೊ ಎಂಪ್ಲಾಯೀಸ್ ಅಸೋಸಿಯೇಶನ್ ಅಧ್ಯಕ್ಷ ಕಾಂ. ಸೂರ್ಯನಾರಾಯಣರಾವ್ ಮತ್ತು ಇತರ ಕಾರ್ಮಿಕ ಮುಖಂಡರುಗಳನ್ನು ಗಡೀಪಾರು ಮಾಡಲು ಪೋಲೀಸರು ಕ್ರಮ ಕೈಗೊಂಡಾಗ ಇದಕ್ಕೆ ಹೈಕೋರ್ಟಿನಿಂದ ತಡೆಯಾಜ್ಞೆ ಬಂತು. ಪೋಲೀಸರು ತೆಗೆದುಕೊಳ್ಳಬೇಕೆಂದಿರುವ ಈ ಕ್ರಮದ ಬಗ್ಗೆ ಕೋರ್ಟಿನಲ್ಲಿ ಇನ್ನೂ ಅಂತಿಮವಾಗಿ ತೀರ್ಮಾನವಾಗಬೇಕಷ್ಟೆ. ಆದರೆ, ಇದೇ ಸಂದರ್ಭ ಎಂತಾದರೂ ಸಿ. ಐ. ಟಿ. ಯು. ಮುಖಂಡತ್ವದಲ್ಲಿ ಬೆಳೆದು ಬರುತ್ತಿರುವ ಹೋರಾಟಗಳನ್ನೂ ಮತ್ತು ಸಂಘಟನೆಗಳನ್ನೂ ಛಿದ್ರಗೊಳಿಸಬೇಕೆಂಬ ದುರುದ್ದೇಶದಿಂದ ಪೋಲೀಸರು ಕಾರ್ಮಿಕ ಮುಖಂಡರುಗಳನ್ನು ಗಡೀಪಾರು ಮಾಡಲು ಮತ್ತೊಂದು ಕ್ರಮವನ್ನು ತೆಗೆದುಕೊಳ್ಳುತ್ತಲಿದ್ದಾರೆ.

ಕಾಂ. ಸೂರ್ಯನಾರಾಯಣರಾವ್ ಮತ್ತು ಇಂಡಿಯನ್ ಟೊಬೇಕೋ ಕಂಪೆನಿಯ ಹದಿನೆಂಟು ಕಾರ್ಮಿಕರನ್ನು ಸೇರಿಸಿ, ಕಾನೂನು ಭಂಗವಾಗುವುದೆಂಬ ಕಾರಣವನ್ನು ತೋರಿಸಿ ಬೆಂಗಳೂರಿಂದ ಗಡೀಪಾರು ಮಾಡಲು ಹೊಸತಾಗಿ ಮತ್ತೆ ಕ್ರಮಗಳನ್ನು ಕೈಗೊಳ್ಳುತ್ತಲಿರುವುದಾಗಿ ಪೋಲೀಸ್ ಕಮೀಷನರ್ ಗರುಡಾಚಾರ್ ಅವರು ಹೇಳಿದ್ದಾರೆ. ಪೋಲೀಸರ ಈ ಕ್ರಮ ಬಹುರಾಷ್ಟ್ರೀಯ ಕಂಪೆನಿಯ ಮಾಲಕರುಗಳಿಗೆ, ದೊಡ್ಡ ಬಂಡವಾಳಶಾಹಿಗಳಿಗೆ ಅನುಕೂಲಮಾಡಿಕೊಡುವುದಕ್ಕೆ ಎಂಬುದಂತೂ ಸ್ಪಷ್ಟ. ಐ. ಟಿ. ಸಿ. ಕಾರ್ಮಿಕರ ಹೋರಾಟ ಮತ್ತು ಬೇಡಿಕೆಗಳ ಬಗ್ಗೆ ಹೇಳುವುದಾದರೆ, ಕಾರ್ಮಿಕ ಪ್ರತಿನಿಧಿಗಳು ಮತ್ತು ಲೇಬರ್ ಕಮೀಷನರವರು ಕೂಡಾ ಕೊಟ್ಟ ಸಲಹೆ ಮತ್ತು ಸೂತ್ರಗಳನ್ನು ಮಾಲಕರು ತಳ್ಳಿಹಾಕಿದ್ದಾರೆ. ರಾಷ್ಟ್ರದ ಸಂಪತ್ತನ್ನು ಕೊಳ್ಳೆಹೊಡೆಯುವ ಈ ಬಹುರಾಷ್ಟ್ರೀಯ ಕಂಪೆನಿಯ ಮಾಲಕರ ಮೇಲೆ ನ್ಯಾಯಯುತವಾಗಿ ಸಮಸ್ಯೆಗಳನ್ನು ಪರಿಹರಿಸುವಂತೆ ಒತ್ತಾಯಿಸುವುದಕ್ಕೆ ಬದಲಾಗಿ, ಸರಕಾರವು ಮುಷ್ಕರವನ್ನು ಹತ್ತಿಕ್ಕುವ ಮಾಲಕರ ಪ್ರಯತ್ನಕ್ಕೆ ನೇರ ಬೆಂಬಲವೀಯುತ್ತಲಿದೆ.

ಸರಕಾರದ ಈ ಪಕ್ಷಪಾತ ಧೋರಣೆಯನ್ನು ಮತ್ತು ಪ್ರಜಾಪ್ರಭುತ್ವ ವಿರೋಧಿ ಕ್ರಮಗಳನ್ನು ಸಿ. ಐ. ಟಿ. ಯು. ಬೆಂಗಳೂರು ಜಿಲ್ಲಾ ಸಮಿತಿಯ ಅಧ್ಯಕ್ಷರು ಮತ್ತು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯಸಮಿತಿ ಸೆಕ್ರೆಟಾರಿಯೆಟ್ ಸದಸ್ಯರೂ ಆದ ಕಾಂ. ಎನ್. ಎಲ್. ಉಪಾಧ್ಯಾಯರೂ, ಪಕ್ಷದ ರಾಜ್ಯಸಮಿತಿ ಕಾರ್ಯದರ್ಶಿ ಕಾಂ. ಎಂ. ಕೆ. ಭಟ್ ಅವರೂ ಖಂಡಿಸಿದ್ದಾರೆ. ಅನೇಕ ತ್ಯಾಗ ಬಲಿದಾನಗಳ ಮೂಲಕ ಪಡೆದುಕೊಂಡ ಸಂಘಟನಾ ಹಕ್ಕು ಮತ್ತು ಇತರೆ ಪ್ರಜಾಪ್ರಭುತ್ವ ಹಕ್ಕುಗಳನ್ನು ರಕ್ಷಿಸಿಕೊಳ್ಳಲು ಎಲ್ಲಾ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಒಂದಾಗಿ ಮುಂದೆ ಬರಬೇಕೆಂತಲೂ, ಸರಕಾರವು ಅನುಸರಿಸುತ್ತಲಿರುವ ಕಾರ್ಮಿಕ ವಿರೋಧಿ ಕ್ರಮವನ್ನು ಒಕ್ಕೊರಲಿನಿಂದ ಖಂಡಿಸಬೇಕೆಂತಲೂ ಇವರು ಕರೆ ಇತ್ತಿರುವರು. ಪಕ್ಷದ ಮತ್ತು ಸಾಮೂಹಿಕ ಸಂಘಟನೆಗಳ ಎಲ್ಲಾ ಘಟಕಗಳು ಸಂಯುಕ್ತ ಚಳುವಳಿಗಳನ್ನು ನಡೆಸಲು ಮುಂದಾಗಲೂ ಇವರು ಕರೆ ಇತ್ತಿರುವರು. ●

ಪ್ರತಿಭಟನೆಗಳನ್ನು ಎದುರಿಸಲಿರುವ ವಿಧಾನಸಭಾ ಅಧಿವೇಶನ

ಜನವರಿ ಲೋಕಸಭಾ ಚುನಾವಣೆಯಾದ ಮೇಲೆ ಪಕ್ಷಾಂತರವನ್ನು ಮಾಡಿಸಿಕೊಂಡು ಕರ್ನಾಟಕ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಶ್ರೀ ಗುಂಡೂರಾಯರ ಕಾಂಗ್ರೆ ಸರಕಾರಕ್ಕೆ ಬಹಳಷ್ಟು ಬೆಂಬಲವಿದ್ದು ಸುಭದ್ರವಾಗಿರುವುದೆಂದು ಸಾರಿ ಹೇಳುತ್ತಲಿದ್ದರೂ ಜನರ ಸಮಸ್ಯೆಗಳ ಪರಿಹಾರದತ್ತ ಸರಕಾರವು ಏನೇನೂ ಗಮನಕೊಡುತ್ತಿಲ್ಲ. ಬದಲು ದುಡಿಯುವ ಜನತೆಯ ಮೇಲೆ ಭೂಮಾಲಕ ಬಂಡವಾಳಶಾಹಿ ಶಕ್ತಿಗಳು ನಡೆಸುತ್ತಲಿರುವ ಶೋಷಣೆ ಮತ್ತು ದಬ್ಬಾಳಿಕೆಗಳಿಗೆ ಪ್ರೋತ್ಸಾಹ, ಬೆಂಬಲಗಳನ್ನು ನೀಡಲಾಗುತ್ತಿದೆ. ಬಂಡವಾಳಗಾರ ವರ್ಗಕ್ಕೆ ಅನುಕೂಲವಾಗುವಂತೆ ಕಾರ್ಮಿಕರ ಸಂಘಟನಾ ಹಕ್ಕುಗಳನ್ನೇ ಕ್ರಮವಾಗಿ ಹತ್ತಿಕ್ಕುವ ಯೋಜನೆಗಳು ನಡೆಯುತ್ತಲಿವೆ. ಅವಶ್ಯ ಸೇವಾ ವಿಭಾಗಗಳ ಹೆಸರಲ್ಲಿ ಮುಷ್ಕರ ನಿಷೇಧಿಸುವ ಕ್ರಮ, ಕಾರ್ಮಿಕರ ಮುಂದಾಳುಗಳನ್ನು ಗಡೀಪಾರು ಮಾಡುವ ಕ್ರಮ, ಬೆಳಗಾವಿಯಲ್ಲಿ ನೂರಾರು ಕಾರ್ಮಿಕರ ಬಂಧನ ಮತ್ತು ಲಾಠಿಚಾರ್ಜು, ಸಂಸೆ ಟೀ ಎಸ್ಟೇಟಿನಲ್ಲಿ ಲಾಠಿಚಾರ್ಜು ಮತ್ತು ಕಾರ್ಮಿಕರ ಮೇಲೆ ಅಮಾನುಷ ಹಲ್ಲೆ ನಡೆಸಿ ಹತ್ತಾರು ಮಂದಿಯನ್ನು ಬಂಧಿಸಿರುವುದು, ಇದೇ ಸಂದರ್ಭದಲ್ಲಿ ಆಳುವ ಪಕ್ಷದ ಮುಖಂಡರುಗಳಾದ ಎಫ್. ಎಮ್. ಖಾನ್ ನಂತಹವರು ಕಮ್ಯುನಿಸ್ಟ್ ಕಾರ್ಮಿಕರಿಗೆ ಎಚ್ಚರ ಕೊಡುತ್ತಲಿರುವುದು, ಇವೆಲ್ಲವುಗಳ ಹಿಂದೆ ಕರಾಳ ಯೋಜನೆ ಇರುವಂತಿದೆ. ಕೇವಲ ಸಿ. ಐ. ಟಿ. ಯು. ಮತ್ತು ಸಿ. ಐ. ಟಿ. ಯು. ನೇತೃತ್ವದ ಕಾರ್ಮಿಕ ಸಂಘಟನೆಗಳ ಮೇಲೆ ಮಾತ್ರವಲ್ಲ, ಎಲ್ಲಾ ಸಂಘಟಿತ ಕಾರ್ಮಿಕ ವರ್ಗದ ಮೇಲೆ ಪ್ರಹಾರ ಬೀಳುತ್ತಲಿದೆ.

ರಾಜ್ಯದಲ್ಲಿ ದಲಿತರ ಮೇಲೆ ನಡೆಯುವ ದಾಳಿ, ದಬ್ಬಾಳಿಕೆ ಮತ್ತು ಶೋಷಣೆಗಳಿಗೆ ಕೊನೆಯಿಲ್ಲದಂತಾಗಿದೆ. ಹುಣಸೆಕೋಟೆ ಶೇಷಗಿರಿಯಪ್ಪನ ಕೊಲೆಯಾದ ಬಿಸಿ ಇನ್ನೂ ಇರುವಾಗಲೇ ಭದ್ರಾವತಿಯಲ್ಲಿ ಇನ್ನೊಬ್ಬ ದಲಿತ ಯುವಕ ಕೃಷ್ಣನ ಕೊಲೆಯಾದ ಸುದ್ದಿ ಬಂದಿದೆ. ರಾಜ್ಯದ ಕಾರ್ಮಿಕ ಸಚಿವ ಇಬ್ರಾಹಿಮ್ ಅವರ ಸಹೋದರನೇ ಈ ಕೊಲೆಗಾರ ಗುಂಪಿನ ಮುಖ್ಯಸ್ಥನೆಂದು ಆಪಾದಿಸಲಾಗಿದೆ. ಹುಣಸೆಕೋಟೆ ಪ್ರಕರಣದಲ್ಲಿ ಪೋಲೀಸರು ತೋರಿಸಿದ ಔದಾಸೀನ್ಯದಂತೆ, ಇದರಲ್ಲೂ ತೋರಿಸಲಾಗುತ್ತಿದೆ ಎಂದೂ, ಕೇಸನ್ನು ಸಡಿಲ ಮಾಡುವ ಪ್ರಯತ್ನಗಳು ನಡೆಯುತ್ತಲಿವೆಯೆಂದೂ ಸುದ್ದಿ ಇದೆ. ಹಲವಾರು ತಿಂಗಳುಗಳಿಂದ ಸಾವು–ಬದುಕುಗಳ ಮಧ್ಯೆ ಹೋರಾಡುತ್ತಲಿರುವ ಬೆಂಗಳೂರಿನ ತಾತಗುಣಿ ಎಸ್ಟೇಟಿನ ಕಾರ್ಮಿಕರು ನ್ಯಾಯ ಸಿಗದೆ ಇನ್ನೂ ವಂಚಿತರಾಗೇ ಇದ್ದಾರೆ.

ಹಿಂದಿನ ಸರಕಾರವು ಮಾಡಿದ್ದ ಕೆಲವೊಂದು ಉತ್ತಮ ಕಾರ್ಯಕ್ರಮಗಳನ್ನು ಗುರುತಿಸಿ ಮುಂದೊಯ್ಯುವುದಕ್ಕೆ ಬದಲಾಗಿ, ಈದಿನ ಸರಕಾರವು ಅವುಗಳನ್ನೆಲ್ಲಾ ಅಲಕ್ಷಿಸುವಂತಿದೆ. ರಾಜ್ಯದ ಮುಖ್ಯಮಂತ್ರಿಯವರು ಆಗಾಗ ನೀಡುವ ಹೇಳಿಕೆಗಳನ್ನು ಮತ್ತು ಸರಕಾರದ ಕ್ರಮಗಳನ್ನು ನೋಡಿದಲ್ಲಿ ಎಲ್ಲವೂ ಅನಿಶ್ಚಿತತೆಗಳಿಂದ ತುಂಬಿದೆ. ಲಕ್ಷಾಂತರ ಮಂದಿ ವಿದ್ಯಾರ್ಥಿಗಳ ಪರೀಕ್ಷಾ ಫಲಿತಾಂಶವು ಪ್ರಕಟವಾಗುವುದರೊಂದಿಗೆ, ಹೊಸ ಶಾಲಾ ವರ್ಷ ಪ್ರಾರಂಭವಾಗುತ್ತಲಿದ್ದು ಶಾಲಾಕಾಲೇಜು ಪ್ರವೇಶಕ್ಕಾಗಿ ನೂಕುನುಗ್ಗಲು ಒಂದೆಡೆಯಾದರೆ, ಪದವೀಧರರು ಉದ್ಯೋಗ

(ಕೊನೆಯ ಪುಟ ನೋಡಿ)

"ಜನಭಾಷೆಯ ಉಳಿವಿಗಾಗಿ ಸಾಹಿತಿಗಳು ಹೋರಾಟಕ್ಕಿಳಿಯಿರಿ"

"ಸರಕಾರದ ಸಹಾಯಧನ ಪಡೆಯುತ್ತಿರುವ ಸಂಸ್ಥೆಗಳ ಪದಾಧಿಕಾರಿಗಳು ಸರ್ಕಾರದ ಸರ್ವಾಧಿಕಾರಿ ನೀತಿಯ ಸಂಸ್ಕೃತ ಹೇರಿಕೆ ವಿರೋಧಿಸಲು ರಾಜಿನಾಮೆಕೊಟ್ಟು ಬೀದಿಗಿಳಿದು ಹೋರಾಟ ಮಾಡಿರಿ" ಹೀಗೆಂದು ಬಂಡಾಯ ಸಾಹಿತ್ಯ ಸಂಘಟನೆಯ ರಾಜ್ಯಸಮಿತಿ ಸಂಚಾಲಕ ಬರಗೂರು ರಾಮಚಂದ್ರಪ್ಪ ಕರೆಕೊಟ್ಟರು. ಧಾರವಾಡ ಜಿಲ್ಲಾ ಬಂಡಾಯ ಸಾಹಿತ್ಯ ಸಂಘಟನೆಯ ಆಶ್ರಯದಲ್ಲಿ ಹಲವಾರು ಸಂಘ ಸಂಸ್ಥೆಗಳ ಭಾಷಣಕಾರರನ್ನು ಸೇರಿಸಿ ಏರ್ಪಡಿಸಿದ್ದ ವಿಚಾರ ಸಂಕಿರಣದಲ್ಲಿ ಬರಗೂರರವರು ಮಾತನಾಡುತ್ತ ಸಂಸ್ಕೃತ ಹೇರಿಕೆ ವಿರೋಧ ಹೋರಾಟ ಎಂದರೆ ಬಡಜನರ ಬದುಕಿನ ಹೋರಾಟ. ಜನರ ಬದುಕು ಬೇರೆ, ಭಾಷೆ ಬೇರೆ ಎನ್ನುವುದೇ ಅವೈಚಾರಿಕ: ಅವೈಜ್ಞಾನಿಕ ಶಿಕ್ಷಣವನ್ನು ಜನರ ಬದುಕಿನಿಂದ ಬೇರ್ಪಡಿಸಲು ಸಾಧ್ಯವಿಲ್ಲ. ಜನರ ಮಾತೃಭಾಷೆಯೇ ಮೊದಲ ಭಾಷೆ ಎಂಬ ತಾತ್ವಿಕ ನಿಲುವು ನಮ್ಮದು. ಭಾಷೆಯ ಪ್ರಶ್ನೆ ಬದುಕಿನ ಪ್ರಶ್ನೆ; ಮೌಲ್ಯಗಳ ಪ್ರಶ್ನೆ, ಬರೀ ಪಠ್ಯ ಅಲ್ಲ. ಸಂಸ್ಕೃತ ತೆಗೆದುಕೊಂಡವರು ಅಂಕ ಹೆಚ್ಚು ತೆಗೆದುಕೊಳ್ಳುತ್ತಾರೆ ಎನ್ನುವ ಕಾರಣಕ್ಕಾಗಿಯೇ ವಾದಿಸುವುದಾದರೆ ನಮಗೆ ಮುಂದೆ ಸಮರ್ಥನೀಯವಾದವೇ ಇಲ್ಲ. ಅಲ್ಲದೆ ಇದು ಅಪಾಯಕಾರಿ ನಿಲುವಾಗಿ ಹಿತಾಸಕ್ತಿಗಳಿಗೆ, ಯಥಾಸ್ಥಿತಿವಾದಿಗಳಿಗೆ ಅನುಕೂಲಕರವಾಗಿ ಪರಿಣಮಿಸಬಹುದು. ಆದ್ದರಿಂದ ಸಂಸ್ಕೃತ ಹೇರಿಕೆ ವಿರೋಧ ಎಂದರೆ ಯಥಾಸ್ಥಿತವಾದಿಗಳ ವಿರುದ್ಧ ಬಡಜನರ ಹೋರಾಟ, ಹೋರಾಟದಲ್ಲಿ ತತ್‌ಕ್ಷಣದ ದೃಷ್ಟಿಗಿಂತ ದೂರದೃಷ್ಟಿ ಮುಖ್ಯ. ಸಂಸ್ಕೃತಕ್ಕಿಂತ ಇಂಗ್ಲೀಷ್ ಓದಿಸಿ ಎನ್ನುವುದು ಒಂದು ಕುತಂತ್ರ. "ಸಂಸ್ಕೃತವೇ ಸಂಸ್ಕೃತಿ"ಯಂತೆ? ಎಂತಹ ಸಂಸ್ಕೃತಿ? ವೈದಿಕ ಸಂಸ್ಕೃತಿಯೇ? ಎಲ್ಲ ಪ್ರದೇಶಗಳ ಎಲ್ಲ ಜನರ ಬದುಕು ಭಾಷೆಯೇ ಒಟ್ಟು ಸಂಸ್ಕೃತಿ. ಇದಲ್ಲದೆ ದೇವಭಾಷೆ ಸಂಸ್ಕೃತವೆಂದು, ಸತ್ತು ಸ್ವರ್ಗ ಸೇರಿರುವ ಭಾಷೆ ತಂದು ಜನತೆಯ ಮೇಲೆ ಹೇರುವುದು ಪ್ರತಿಗಾಮಿ ಸರ್ವಾಧಿಕಾರಿ ನಿಲುವು. ಯಾವ ಮಟ್ಟದಲ್ಲೂ ಸಂಸ್ಕೃತ ಪ್ರಥಮ ಭಾಷೆಯಾಗಿ ಉಳಿಯಲಾರದು ಎನ್ನುವ ತೀರ್ಮಾನಕ್ಕೆ ಬಂದಿರುವಾಗ ಸಮಿತಿ ನಿಯಮಿಸಿರುವುದು ಪ್ರಜಾಪ್ರಭುತ್ವವಾದಿಗಳು ಎಂದು ತೋರಿಸಿಕೊಳ್ಳುವ ನಾಟಕಕ್ಕೆ. ಆದ್ದರಿಂದ ಇಂತಹ ಪ್ರತಿಗಾಮಿ ನಿಲುವಿನ ವಿರುದ್ಧ ಹೋರಾಡಲು ಪರಿಷತ್ತು, ಅಕಾಡಮಿಯ ಅಧಿಕಾರಿ ಸಾಹಿತಿಗಳು ರಾಜಿನಾಮೆಕೊಟ್ಟಾದರೂ ಹೋರಾಟಕ್ಕೆ ನಿಲ್ಲಬೇಕೆಂದರು.

ನಂತರ ಮಾತನಾಡಿದ ಧಾರವಾಡ ಜಿಲ್ಲಾ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಗುರುಲಿಂಗ ಕಾಪಸೆಯವರು ನಾನು ರಾಜಿನಾಮೆಗೆ ಸಿದ್ಧ; ಇದು ಭಾವನಾತ್ಮಕ ನಿರ್ಧಾರ ಅಲ್ಲ, ವಾಸ್ತವ ಎಂದ ಅವರು ಶೈಕ್ಷಣಿಕ ವಿಷಯವಾಗಿ ಮಾತನಾಡುತ್ತ ಕರ್ನಾಟಕದಲ್ಲಿ ಒಂದೇ ಸಂಸ್ಕೃತ ತರುವ ಈ ಪ್ರಯತ್ನ ನಡೆದಿದೆ. ಮಾತೃಭಾಷೆಗೆ ಪರ್ಯಾಯ ಇನ್ನೊಂದು ಮಾತೃಭಾಷೆಯೇ ಹೊರತು ಸಂಸ್ಕೃತ ಅಲ್ಲ. ಸಂಸ್ಕೃತ ಎಂದೂ ಜನಸಾಮಾನ್ಯರ ಭಾಷೆ ಅಲ್ಲ. ಅಂಕ ಹೆಚ್ಚು ತೆಗೆದುಕೊಳ್ಳುವುದಕ್ಕಾಗಿ ಸಂಸ್ಕೃತ ತೆಗೆದುಕೊಂಡು ಮುಂದೆ ಎಂಜಿನೀಯರಿಂಗ್, ಮೆಡಿಕಲ್‌ಗೆ ಹೋಗುತ್ತಾರೆ. ಇವರೆಲ್ಲ ಎಂತಹ ಸಂಸ್ಕೃತ ಉದ್ಧಾರಕರು. ಅಲ್ಲದೆ ಹೀಗೆ ತೆಗೆದುಕೊಳ್ಳುವವರೆಲ್ಲರೂ ಶ್ರೀಮಂತ ವಿದ್ಯಾವಂತ ವರ್ಗ ಹಾಗೂ ನಗರ ವರ್ಗದವರೇ ಹೊರತು ಹಳ್ಳಿಗಾಡಿನವರಲ್ಲ. ಆದ್ದರಿಂದ ಹೈಸ್ಕೂಲ್ ಪ್ರಾರಂಭವಾಗುವ ಜೂನ್ ಹೊತ್ತಿಗೆ ಸಂಸ್ಕೃತ ವಿರೋಧ ಆಂದೋಲನವನ್ನು ರೂಪಿಸಲು ಕ್ರಿಯಾಶೀಲರಾಗಬೇಕೆಂದರು.

ನಂತರ ಮಾಜೀ ವಿಧಾನ ಪರಿಷತ್ ಸದಸ್ಯ ಕಲ್ಲಣ್ಣನವರ್ ಮಾತನಾಡುತ್ತ "ಆಡಳಿತ ಭಾಷೆ ಸಮಾನ್ಯರ ಭಾಷೆಯಾದಾಗ ಜನಸಾಮಾನ್ಯರಿಗೆ ನ್ಯಾಯ ಸಿಗ್ತದೆ" ಎಂಬ ಗಾಂಧೀಜಿಯ ಕನಸು ನನಸಾಗಬೇಕೆಂದರಲ್ಲದೆ, 'ಇದ್ದಂತೆ ಇರು ನೀ ಸಿದ್ದಯ್ಯನ ತತ್ವ ವಿದು ಎಂದಾಗ ಬಡಜನರ ಉದ್ಧಾರ ಎಲ್ಲಿಯದು?" ಎಂದರು.

ರುದ್ರಪ್ಪಕಾಯಿ ಮಾತನಾಡುತ್ತ ಪ್ರಜಾಪ್ರಭುತ್ವ ಪರಿಕಲ್ಪನೆ (Concept)ಗಳ ನಡುವೆ ಹೋರಾಟ ಹೊಸ ಆಯಾಮಗಳನ್ನು ಪಡೆಯುತ್ತದೆ. ಸರ್ವಾಧಿಕಾರಿಗಳು ಸಂಸ್ಕೃತ ಇರಲಿ ಎನ್ನುತ್ತಿದ್ದಾರೆ. ಇನ್ನೂ ಪ್ರಜಾಪ್ರಭುತ್ವ ಬೇರೂರಿಲ್ಲ, ಹೊಸ ಬದುಕನ್ನು ಸೃಷ್ಟಿಸುವ ಸಮಯದಲ್ಲಿ ಈ ಬೇಡಿಕೆ ಬರುತ್ತಿರುವುದರಿಂದ ಇದು ಬಹು ಮುಖ್ಯ. ವೈಜ್ಞಾನಿಕ ಪ್ರಗತಿ ಜೀವನದ ಮೇಲೆ ಬಹಳ ಪ್ರಭಾವ ಬೀರುವುದರಿಂದ ಜೀವನ ಹೊಸ ಆಯಾಮ ಪಡೆಯುತ್ತದೆ. ಸಂಸ್ಕೃತ ಪ್ರತಿಷ್ಠಾಪನೆ ಪ್ರಜಾಪ್ರಭುತ್ವಕ್ಕೆ ಅಪಾಯಕಾರಿ. ಈ ಬೀಜಗಳನ್ನು ಮೊದಲೇ ಹಿಚುಕಿ ಹಾಕಬೇಕು. ವಿದ್ಯಾರ್ಥಿಗಳು ಇದರಲ್ಲಿ ಹೆಚ್ಚಾಗಿ ಪಾಲ್ಗೊಳ್ಳಬೇಕೆಂದರು.

ಆರ್. ಎಸ್. ಗಿರ್ಜಿ ಮಾತನಾಡುತ್ತ ಶೋಷಣೆ ಮೊದಲು ಧಾರ್ಮಿಕ ರೂಪದಲ್ಲಿತ್ತು. ಈಗ ಪ್ರಜಾಪ್ರಭುತ್ವದ ಹೆಸರಲ್ಲಿ ನಯವಾದ ಶೋಷಣೆ ಇದೆ. ಸಂಸ್ಕೃತ ಪ್ರತಿಷ್ಠಾಪಿಸುವುದು ನೋವಿಲ್ಲದ ಶೋಷಣೆ ಎಂದರು.

ಪ್ರೊ. ಬಿ. ಕೃಷ್ಣಮೂರ್ತಿ ಮಾತನಾಡುತ್ತ 'ಸಮಾಜದಲ್ಲಿ ಆಮೂಲಾಗ್ರ ಬದಲಾವಣೆ ತರಬೇಕಾದರೆ ಪ್ರಜ್ಞೆ ಯೋಗ್ಯತೆ ಬೆಳಸಬೇಕು. ಅದಕ್ಕೆ ಜನಭಾಷೆ ಬೇಕು. ಆಡುಭಾಷೆಯಿಂದ ಈ ಚಾರಿತ್ರಿಕ ಘಟ್ಟದಲ್ಲಿ ನಮ್ಮ ಸಮಸ್ಯೆ ಬಗೆಹರಿಯುವಿಕೆಗೆ ಸಂವಾದಿಸಬಹುದು. ಜನಭಾಷೆ ಇಲ್ಲದಿದ್ದರೆ ಜೀವನ ಹೋರಾಟಕ್ಕೆ ಅಡ್ಡಿ. ಜೀವನದ ಸತ್ಯವನ್ನು ಸಾಮಾನ್ಯರಿಗೆ ಹೇಳಿಲ್ಲ. ವೈಜ್ಞಾನಿಕ ದೃಷ್ಟಿ ಜೀವನದ ಸತ್ಯ ಬದಲಾಯಿಸುವುದು. ಮುಖ್ಯಮಂತ್ರಿ ಬೇಜವಾಬ್ದಾರಿಯಿಂದ ಹೇಳಿಲ್ಲ ಅವರ ದೃಷ್ಟಿಕೋನವೇ ಹಾಗಿರಬೇಕೆಂದರು.

ರಾಚಪ್ಪಬೆಟಸೂರ ಮಾತನಾಡುತ್ತ ವೇದಿಕೆಯ ಮೇಲೆ ಭಾಷಣ ಮಾಡುವವರೆಲ್ಲ ತಮ್ಮ ಮಕ್ಕಳಿಗೆ ಸಂಸ್ಕೃತ ಕಲಿಸುವುದೋ, ಇಂಗ್ಲೀಷ್ ಕಲಿಸುವುದೋ-ನಿಲ್ಲಬೇಕೆಂದು ಕೆಂಡಕಾರಿದರು. ಭಾಷೆಯ ಹಿಡಿತದಿಂದ ಒಬ್ಬ ಶ್ರೀಮಂತ ವಿದ್ಯಾವಂತ ಲಿಂಗಾಯತ ಬಡ ಲಿಂಗಾಯತನನ್ನು ಶೋಷಿಸುತ್ತಾನೆ, ಹಾಗೆಯೇ ಒಬ್ಬ ಕುರುಬ, ಹೊಲೆಯ ಕೂಡ ಎಂದರು.

ನಂತರ ಬಿಜಾಪುರದ ವಿ ಎಸ್. ಹಿಪ್ಪರಗಿಯವರು ಮಾತನಾಡುತ್ತ ನಾವೆಲ್ಲರೂ ಒಂದಲ್ಲ ಒಂದು ರೀತಿಯಿಂದ ವ್ಯವಸ್ಥೆಯಿಂದ ಲಾಭ ಮಾಡಿಕೋಬೇಕು ಎನ್ನುವವರು. ಸಮತೆ, ಮೌಲ್ಯಗಳ ವಿರುದ್ಧ ಸಂಸ್ಕೃತ ಇದೆ ಎಂದ ಅವರು ಸಾಂಕೇತಿಕವಾಗಿ ಒಂದು ಉಪಕತೆ ಹೇಳುತ್ತ "ಒಳ್ಳೇ ಶ್ರೀಮಂತ ಮನೆತನದ ನಯನಾಜೂಕಾದ ಹುಡುಗೀನ ಒಕ್ಕಲುತನದ ಹುಡುಗ್ಗ ಮದುವಿ ಮಾಡಬೇಕು ಅನ್ನಾಕತ್ತಾರ... ಆದರ ಒಕ್ಕಲಿಗ್ಗ ಮದುವಿ ಆಗ್ಯಾದ. ಆದರ ಹುಡುಗೀನ ಸತ್ಯದ. ಆದರೂ ಇದಕ್ಕ ಸರಕಾರದ ಬೆಂಬಲ ಅದ. ಆದರ ಒಂದು ಮುದುಕಿ ಅಂತು: ಅದೆಂಗ ಆಗತದ ನೋಡೂನು."

ಹ. ಸೋಮಶೇಖರ ಮಾತನಾಡುತ್ತ ನಮ್ಮ ವಿರೋಧ ಭಾವನಾತ್ಮಕವಾಗಿ ಅಲ್ಲ; ಸೈದ್ಧಾಂತಿಕವಾಗಿ. ವರ್ಣಾಶ್ರಮ ಊಳಿಗಮಾನ್ಯದೊಂದಿಗೆ ಸತ್ತಿತು. ಆದರೆ ವೈದಿಕರು ಇಂಗ್ಲೀಷ್‌ಗೆ ಹೋದರು. ಕಾಂಗ್ರೆಸ್ಸಿನವರು ಜನಪರ ಹೋರಾಟ ಬಗ್ಗುಬಡಿಯುತ್ತಾರೆ. ಆರ್. ಎಸ್. ಎಸ್.ದವರಿಗೆ ಕನ್ನಡದ ಉದ್ಧಾರ ಸಂಸ್ಕೃತದ ಪುರೋಹಿತ್ಯದಿಂದಲೇ ಆಗಬೇಕು. ಶಿವಸೇನೆ, ಅಮರ ಬಂಗಾಳಿಗಳು ತಮ್ಮ ಭಾಷೆಯ ಕೋಮು ಭಾವನೆಯಿಂದ ಬೇರೆ ಭಾಷೆಗಳನ್ನು ದ್ವೇಷಿಸುತ್ತ ಫ್ಯಾಸಿಸ್ಟ್ ಆಗುತ್ತಾರೆ. ಹೀಗೆ ಜಾತಿ, ವರ್ಗಗಳು ಸೂಕ್ಷ್ಮವಾಗಿ ಕೆಲಸ ಮಾಡುತ್ತವೆ. ಇದು ತಪ್ಪಿ ಭಾಷೆಯ ಪ್ರಜಾಪ್ರಭುತ್ವೀಕರಣ ಬೇಕೆಂದರು.

ಸಂಸ್ಕೃತ ವಿರೋಧಕ್ಕೆ ಯಾವುದೇ ಸಂಬಂಧಗಳು ಅಡ್ಡಿಬರಬಾರದು. ಬೀಜಕ್ಕೆ ಗೊಬ್ಬರದ ಹೆಸರಿಡಾಕ ಬರಾದಿಲ್ಲ. ಗುಂಡೂರಾಯರೇ ನೀವು ಸಂಸ್ಕೃತದಲ್ಲೇ ಮಾತನಾಡಬೇಕು ಎಂದು challenge ಕೊಟ್ಟರು ವಿಜಯಪಾಟೀಲ.

ಭಾಷಾತಜ್ಞ ವಿಲ್ಯಂಮಾಡ್ತ ಮಾತನಾಡುತ್ತ ಸಂಸ್ಕೃತ ಎಲ್ಲ ಭಾಷೆಯ ತಾಯಿ ಅಲ್ಲ 'ರಾಣಿ' ಎಂದರು. ಅದು ಪ್ರಭಾವ ಬೀರಿದೆ, ಆದರೆ ಅದೇ ತಾಯಿ ಅಲ್ಲ ಎಂದರು.

ಈಗಾಗಲೇ ಶಿಕ್ಷಣ ತಜ್ಞರು ಪರಿಶೀಲಿಸಿ ಪ್ರಥಮ ಸ್ಥಾನದಿಂದ ಆದರ ಸ್ಥಾನಕ್ಕೆ ಕಳಿಸಿದ್ದಾರೆ. ಪ್ರಥಮವಾಗಿ ಸೇರಿಕೊಂಡಿದ್ದು ಅನುಚಿತವಾದದ್ದು; ಅಸಂಗತವಾದದ್ದು; ಅವೈಜ್ಞಾನಿಕವಾದದ್ದು. ಬಂಗಾಳದಲ್ಲಿ ಸಂಸ್ಕೃತ ವಿದ್ವಾಂಸರು ಬಹಳವಿದ್ದರೂ ಅಲ್ಲಿಯ ವಿದ್ವಾಂಸರು ಅದನ್ನು ಪ್ರಥಮ ಭಾಷೆಯಾಗಿ ಸೇರಿಸಿಲ್ಲ. ಐಚ್ಛಿಕವಾಗಿ ಮಾಡಿಕೊಳ್ಳಬಹುದು. ಎಲ್ಲಾ ಜನವರ್ಗ ಸೇರಿ ಭಾರತೀಯ ಸಂಸ್ಕೃತಿಯಾಗಿದೆ. ಇದು ಬಹಳ ಸಂಕೀರ್ಣವಾಗಿದೆ. ಎಲ್ಲ ಭಾಷೆಯ ಎಲ್ಲ ಜನರ ಒಟ್ಟು ಬದುಕೇ ಸಂಸ್ಕೃತಿ ಎಂದರು ಚೆನ್ನವೀರಕಣವಿಯವರು.

ಅಧ್ಯಕ್ಷತೆ ವಹಿಸಿದ್ದ ಎಂ. ಎಸ್. ಸುಂಕಾಪುರ ಮಾತನಾಡುತ್ತ ಭಾಷೆ ಜನನಾಡಿಯಾಗಬೇಕು. ಯಾವ ಭಾಷೆಯೂ ಕ್ಷುಲ್ಲಕ ಅಲ್ಲ ಎಂದರು.

ಕಾರ್ಯಕ್ರಮ ನಿರ್ವಹಿಸಿದ ಚಂದ್ರಶೇಖರ ಪಾಟೀಲರು ಸಂಸ್ಕೃತ permanent parent ಆಗಿದೆ ಎಂದು ನಗೆಯಾಡಿದರಲ್ಲದೆ, ಸತ್ತ ಮಂಗ್ಯಾನನ್ನು ಮೆರೆಸುತ್ತ ಹೊಟ್ಟೆ ತುಂಬಿಸಿಕೊಳ್ಳುವ ವೃತ್ತಿಯಂತೆ ಸಂಸ್ಕೃತವಾದಿಗಳಿಗೆ ಇದೂ ಒಂದು ವೃತ್ತಿಯಾಗಿದೆ ಎಂದರು.

ಸಂಸ್ಕೃತ ವಿರೋಧಿ ಜನಭಾಷೆಯ ಹಾಡನ್ನು ಕಾರ್ಯಕ್ರಮದ ಮೊದಲು ವಿಜಯಪಾಟೀಲ, ಗುಡಿಹಳ್ಳಿ ನಾಗರಾಜ, ದಾನಪ್ಪ, ಶಂಕರಕಟಗಿ ಹಾಡಿದರು.

○

ಮೇ 30ರಂದು ಪ್ರತಿಭಟನಾ ದಿನಾಚರಣೆ

ಕಾರ್ಮಿಕರ ಮೇಲೆ ಆಗುತ್ತಿರುವ ದಬ್ಬಾಳಿಕೆ, ಅಗತ್ಯ ಸೇವಾ ಮಸೂದೆ, ಕಾರ್ಮಿಕ ಮುಖಂಡರ ಗಡೀಪಾರು ಮುಂತಾದ ಕ್ರಮಗಳನ್ನು ಪ್ರತಿಭಟಿಸಲು, ಸಿ.ಐ.ಟಿ.ಯು ವಿನ ಕರೆಯ ಮೇಲೆ 30-5-80 ರಂದು ರಾಜ್ಯದ ಹಲವಾರು ಕಡೆ ಸಭೆಸೇರಿ ಪ್ರತಿಭಟನಾ ದಿನಾಚರಣೆಯನ್ನು ನಡೆಸಿದರು.

ಸಕಲೇಶಪುರದಲ್ಲಿ ಕರ್ನಾಟಕ ತೋಟ ಕಾರ್ಮಿಕರ ಸಂಘದ ಆಶ್ರಯದಲ್ಲಿ ಸಿ. ಐ ಟಿ ಯು. ದಶವಾರ್ಷಿಕೋತ್ಸವವನ್ನು ಆಚರಿಸಲಾಯಿತು. ಸಂಘದ ಕಚೇರಿಯ ಮುಂದೆ ಧ್ವಜಾರೋಹಣವಾದ ನಂತರ ಸಕಲೇಶಪುರದ ಮುಖ್ಯ ಬೀದಿಗಳಲ್ಲಿ ಮೆರವಣಿಗೆ ನಡೆಯಿತು. ಕಾರ್ಮಿಕ ನಾಯಕರ ಗಡೀಪಾರು, ಅಗತ್ಯ ಸೇವಾ ಮಸೂದೆ, ಟೀತೋಟದ ಕಾರ್ಮಿಕರ ಮೇಲೆ ನಡೆದ ದೌರ್ಜನ್ಯ ಇವುಗಳನ್ನು ವಿರೋಧಿಸುವ ಘೋಷಣೆಗಳನ್ನು ಮೆರವಣಿಗೆಕಾರರು ಕೂಗುತ್ತಿದ್ದರು.

ಮೆರವಣಿಗೆಯ ನಂತರ ಕಚೇರಿಯ ಮುಂದೆ ನಡೆದ ಸಭೆಯಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಕಾಂ. ವಿ. ಸುಕುಮಾರ್ ಮಾತನಾಡಿ ಕಾರ್ಮಿಕರು ತಮ್ಮ ಹಕ್ಕುಗಳನ್ನು ರಕ್ಷಿಸಿಕೊಳ್ಳಲು ಹೋರಾಡಲು ಕರೆಯಿತ್ತರು.

ಕೋಲಾರ ಜಿಲ್ಲೆಯ ಜನರಲ್ ವರ್ಕರ್ಸ್‌ಯೂನಿಯನ್ ಆಶ್ರಯದಲ್ಲಿ ಸಿ. ಐ ಟಿ. ಯು. ಹತ್ತನೇ ವಾರ್ಷಿಕೋತ್ಸವದ ಅಂಗವಾಗಿ ಸಂಜೆ ಕಾರ್ಮಿಕ ನಗರದ 3ನೇ ಬ್ಲಾಕ್‌ನಲ್ಲಿ ಸಭೆಸೇರಲಾಗಿತ್ತು. ಕಾಂ. ಎಂ. ಎನ್ ವೆಂಕಟರಮಣಪ್ಪ ಅಧ್ಯಕ್ಷತೆ ವಹಿಸಿದ್ದರು. ಪ್ರಾರಂಭದಲ್ಲಿ ಕಾಂ. ಅಬ್ದುಲ್ ಸುಭಾನ್ ಸ್ವಾಗತಿಸಿದರು. ಸಭೆಯನ್ನು ಉದ್ದೇಶಿಸಿ ಕಾಂ. ಜೆ. ದೊರೆಸ್ವಾಮಿ, ಕಾಂ. ಎನ್. ಮಣಿ ಮಾತನಾಡಿ ಸರ್ಕಾರದ ಕಾರ್ಮಿಕ ವಿರೋಧಿ ನೀತಿಯನ್ನು ಟೀಕಿಸಿದರು. ಕಾಂ. ವಿ. ವೆಂಕಟೇಶ್ ವಂದನಾರ್ಪಣೆ ಮಾಡಿದರು.

ದಾಂಡೇಲಿಯ ಹಲವಾರು ಕಡೆ ಭಿತ್ತಿಪತ್ರಗಳನ್ನು 30-5-80ರಂದು ಅಂಟಿಸಲಾಗಿತ್ತು. ಕಾಂ. ಸೂರಿ ಮತ್ತಿತರರ ಗಡೀಪಾರನ್ನು ರದ್ದು ಮಾಡುವಂತೆ ಭಿತ್ತಿಪತ್ರದಲ್ಲಿ ಆಗ್ರಹಿಸಲಾಗಿತ್ತು. ಅಗತ್ಯ ಸೇವಾ ಮಸೂದೆ, ಇಂಡಾಲ್ ಕಾರ್ಖಾನೆ ಬೀಗಮುದ್ರೆ, ಬೆಳಗಾವಿ ಹೋಮಿಯೋಪತಿ ವಿದ್ಯಾರ್ಥಿಗಳ ಮುಷ್ಕರ ಮುಂತಾದುವುಗಳನ್ನು ಪ್ರಸ್ತಾಪಿಸಲಾಗಿತ್ತು.

●

ಆಟೋಮೊಬೈಲ್ ಕೆಲಸಗಾರರ ಸಂಘದ ಸಭೆ

ಶಿವಮೊಗ್ಗ ಜಿಲ್ಲೆಯ ಆಟೋಮೊಬೈಲ್ ಕೆಲಸಗಾರರ ಸಂಘದ ಕಾರ್ಯಕಾರಿ ಸಮಿತಿಯ ವಿಶೇಷ ಸಭೆಯು 22-5-80ರಂದು ಸೇರಿತ್ತು. ಸಂಘದ ಅಧ್ಯಕ್ಷರಾದ ವಿ. ಬಸವರಾಜ್ ಅಧ್ಯಕ್ಷತೆ ವಹಿಸಿದ್ದರು.

ತೀರ್ಥಹಳ್ಳಿ ಸೇತುವೆ ಅಪಘಾತಕ್ಕೀಡಾಗಿ ಮರಣ ಹೊಂದಿದ ಕಾರ್ಮಿಕರ ಕುಟುಂಬದವರಿಗೆ ಪರಿಹಾರ ಕೊಡಬೇಕೆಂದು ಸಭೆ ಸರ್ಕಾರವನ್ನು ಒತ್ತಾಯಿಸಿತು. ಸಿ. ಐ. ಟಿ. ಯು. ಅಧ್ಯಕ್ಷರಾದ ಕಾಂ. ಸೂರ್ಯನಾರಾಯಣರಾವ್ ಅವರನ್ನು ಮತ್ತು ಇತರ ಕಾರ್ಮಿಕರನ್ನು ಗಡೀಪಾರು ಮಾಡುವುದನ್ನು ಸಭೆ ಖಂಡಿಸಿತು.

●

ಆರ್ಥಿಕ ಸಮೀಕ್ಷೆ:

ಆರ್. ಚಂದ್ರ

ಪ. ಬಂಗಾಳದಲ್ಲಿ 'ಕೆಲಸಕ್ಕೆ-ಕಾಳು' ಕಾರ್ಯಕ್ರಮದ ಕುರಿತು ಕೇಂದ್ರ ಕೃಷಿಮಂತ್ರಿಯ ನಿರಾಧಾರವಾದ ಆಪಾದನೆಗಳು

ಕೇಂದ್ರ ಕೃಷಿಮಂತ್ರಿ ರಾವ್ ಬೀರೇಂದ್ರ ಸಿಂಗ್ ಇತ್ತೀಚೆಗೆ ಪ. ಬಂಗಾಳಕ್ಕೆ ಬಂದಾಗ ರಾಜ್ಯದ ಎಡರಂಗ ಸರಕಾರದ ವಿರುದ್ಧ ಕೆಲವು ಅನವಶ್ಯಕವಾದ ಹಾಗೂ ನಿರಾಧಾರವಾದ ಆಪಾದನೆಗಳನ್ನು ಮಾಡಿದರು. ಕೇಂದ್ರದ ಪ್ರತಿಯೊಬ್ಬ ಮಂತ್ರಿಗೂ ಪ. ಬಂಗಾಳ, ತ್ರಿಪುರಾ ಮತ್ತು ಕೇರಳದ ಎಡರಂಗ ಸರಕಾರಗಳನ್ನು ಕೂತಾಗ ನಿಂತಾಗ ಟೀಕಿಸುವುದೊಂದು ಪರಿಪಾಠವಾಗಿಬಿಟ್ಟಿದೆ! ಕಾರಣ, ದೇಶದಲ್ಲಿ ಈ ಮೂರು ರಾಜ್ಯಗಳಲ್ಲಿ ಮಾತ್ರ ಸುಭದ್ರ ಸರಕಾರಗಳಿವೆ. ಅವುಗಳನ್ನು ಹೇಗಾದರೂ ಮಾಡಿ ಉರುಳಿಸುವುದರಲ್ಲಿ ಇಂದಿರಾ ಕಾಂಗ್ರೆಸ್‌ನ ಮಂತ್ರಿಗಳೂ ಮುಖಂಡರುಗಳೂ ನಿರತರಾಗಿದ್ದಾರೆ. ಕೇಂದ್ರವು ಪ. ಬಂಗಾಳಕ್ಕೆ 'ಕೆಲಸಕ್ಕೆ-ಕಾಳು' ಕಾರ್ಯಕ್ರಮಕ್ಕೆಂದು ಒದಗಿಸಿದ 2,45 000ಟನ್ ಆಹಾರಧಾನ್ಯಗಳಲ್ಲಿ ಶೇ.50ಕ್ಕಿಂತಲೂ ಕಡಿಮೆ ಪ್ರಮಾಣದಷ್ಟು ಬಳಸಲಾದಿದೆ, ಹೆಚ್ಚಿನ ಪ್ರಮಾಣದಲ್ಲಿ ಬಳಸದಿದ್ದರೆ ಮುಂದಿನ ದಿನಗಳಲ್ಲಿ ಆಹಾರಧಾನ್ಯಗಳನ್ನು ಈ ಕಾರ್ಯಕ್ರಮಕ್ಕೆ ಒದಗಿಸಲಾಗುವುದಿಲ್ಲ ಎಂದು ಕೇಂದ್ರ ಕೃಷಿ ಮಂತ್ರಿಗಳು ಆಪಾದಿಸಿದ್ದಾರೆ, ಜೊತೆಗೇ ಬೆದರಿಕೆ ಹಾಕಿದ್ದಾರೆ! ಆದರೆ, ನಿಜಸ್ಥಿತಿ ಏನು? ಮಾನ್ಯ ಮಂತ್ರಿಗಳು ಅದನ್ನು ತಿಳಿದುಕೊಳ್ಳುವಗೋಜಿಗೇಹೋಗಿರಲಾರರು, ಅಥವಾ ಅವರು ಉದ್ದೇಶಪೂರ್ವಕವಾಗಿ ಪ. ಬಂಗಾಳದ ಎಡರಂಗ ಸರಕಾರದ ವಿರುದ್ಧ ಅಪಪ್ರಚಾರ ಮಾಡುತ್ತಿದ್ದಾರೆ.

ಈ ಕೆಳಗಿನ ಅಂಕಿಅಂಶಗಳು ಪ. ಬಂಗಾಳದಲ್ಲಿ 1979-80ರಲ್ಲಿಕಾರ್ಯಗತಗೊಳಿಸಿದ 'ಕೆಲಸಕ್ಕೆ-ಕಾಳು' ಕಾರ್ಯಕ್ರಮವು ಅದೇ ವರ್ಷದಲ್ಲಿ ದೇಶಾದ್ಯಂತ ಕಾರ್ಯಗತಗೊಳಿಸಿದುದಕ್ಕಿಂತ ಎಷ್ಟು ಉತ್ತಮವಾಗಿದೆ ಎಂದು ಸ್ಪಷ್ಟಪಡಿಸುವುವು.

	ಅಖಿಲ ಭಾರತ (ಲಕ್ಷ ಮೆ.ಟನ್)	ಪ. ಬಂಗಾಳ (ಲಕ್ಷ ಮೆ.ಟನ್)
1. ಕೆಲಸಕ್ಕೆ-ಕಾಳು ಕಾರ್ಯಕ್ರಮಕ್ಕೆ ಒಟ್ಟು ಆಹಾರಧಾನ್ಯಗಳನ್ನು ಕೊಡಲು ನಿಗದಿಮಾಡಿದ್ದು.	35	2,15
2. ಫುಡ್ ಕಾರ್ಪೊರೇಶನ್ ಆಫ್ ಇಂಡಿಯಾದ ಮೂಲಕ ನಿಜವಾಗಿ ಒಟ್ಟು ಆಹಾರಧಾನ್ಯಗಳನ್ನು ಬಿಡುಗಡೆ ಮಾಡಿದ್ದು.	28	1.64
3. ಒಟ್ಟು ಆಹಾರಧಾನ್ಯಗಳನ್ನು ಕಾರ್ಯಕ್ರಮಕ್ಕೆ ಬಳಸಿಕೊಂಡದ್ದು.	18	1.16
4. (2)ನೇಯದು(1)ರ ಶೇಕಡಾಂಶ	80%	76.3%
5 (3) ನೇಯದು (4) ನೇಯದರ ಶೇಕಡಾಂಶ	64.3%	70.1%

(ಆಧಾರ: ಅಖಿಲಭಾರತಕ್ಕೆ ಸಂಬಂಧಿಸಿದ ಅಂಕಿಸಂಖ್ಯೆಗಳು, ಫಿನಾನ್ಶಿಯಲ್ ಎಕ್ಸ್‌ಪ್ರೆಸ್, ಮುಂಬಯಿ, ತಾ.5-4-80. ಪ.ಬಂಗಾಳಕ್ಕೆ ಸಂಬಂಧಿಸಿದ ಅಂಕಿಸಂಖ್ಯೆಗಳು, ಪೀಪಲ್ಸ್ ಡೆಮಾಕ್ರಸಿ, ನವದೆಹಲಿ, ತಾ. 18-5-80)

ಅಖಿಲಭಾರತ ಮಟ್ಟದಲ್ಲಿ'ಕೆಲಸಕ್ಕೆ-ಕಾಳು' ಕಾರ್ಯಕ್ರಮಕ್ಕಾಗಿ ಕೇಂದ್ರ ಸರಕಾರವು 1979-80ರಲ್ಲಿ ವಿವಿಧ ರಾಜ್ಯಗಳಿಗೂ ಕೇಂದ್ರಾಡಳಿತ ಪ್ರದೇಶಗಳಿಗೂ ಒಟ್ಟು 35 ಲಕ್ಷ ಮೆ. ಟನ್ ಆಹಾರಧಾನ್ಯಗಳನ್ನು ಒದಗಿಸಲು ನಿಗದಿಮಾಡಿತ್ತು. ವರ್ಷಾಂತ್ಯದಲ್ಲಿ 28 ಲಕ್ಷ ಮೆ. ಟನ್ ಆಹಾರಧಾನ್ಯಗಳನ್ನು ನಿಜವಾಗಿ ಬಿಡುಗಡೆ ಮಾಡಲಾಗಿತ್ತು. ಅಂದರೆ, ನಿಗದಿ ಮಾಡಿದ ಪ್ರಮಾಣದ ಶೇ. 80ರಷ್ಟು ಕಾರ್ಯಕ್ರಮಕ್ಕೆ ಬಿಡುಗಡೆ ಮಾಡಲಾಗಿತ್ತು. ಆದರೆ, ಪ. ಬಂಗಾಳ ರಾಜ್ಯಕ್ಕೆ ಈ ಕಾರ್ಯಕ್ರಮಕ್ಕಾಗಿ ಮಂತ್ರಿಗಳ ಹೇಳಿಕೆಯಂತೆ 2.45 ಲಕ್ಷ ಮೆ. ಟನ್ ಆಹಾರಧಾನ್ಯಗಳನ್ನು ಬಿಡುಗಡೆ ಮಾಡಲು ನಿಗದಿ ಮಾಡಿರಲಿಲ್ಲ; ಬದಲು, 2 15ಲಕ್ಷ ಮೆ. ಟನ್ ಆಹಾರಧಾನ್ಯಗಳನ್ನಷ್ಟೇ ಬಿಡುಗಡೆ ಮಾಡಲು ನಿಗದಿಮಾಡಲಾದಿತ್ತು. ವರ್ಷಾಂತ್ಯದಲ್ಲಿ ಕೇಂದ್ರ ಸರಕಾರವು ಪ. ಬಂಗಾಳ ಸರಕಾರಕ್ಕೆ ನಿಜವಾಗಿ ಬಿಡುಗಡೆ ಮಾಡಿದ ಆಹಾರಧಾನ್ಯಗಳ ಪ್ರಮಾಣ 1.64 ಲಕ್ಷ ಮೆ. ಟನ್. ಅಂದರೆ ನಿಗದಿಮಾಡಿದ ಪ್ರಮಾಣದ ಶೇ. 76.3ರಷ್ಟೇ ಬಿಡುಗಡೆ ಮಾಡಲಾಗಿತ್ತು.

ಅಖಿಲಭಾರತ ಮಟ್ಟದಲ್ಲಿ 1979-80ರಲ್ಲಿ 18 ಲಕ್ಷ ಮೆ. ಟನ್ ಆಹಾರಧಾನ್ಯಗಳನ್ನು 'ಕೆಲಸಕ್ಕೆ-ಕಾಳು' ಕಾರ್ಯಕ್ರಮಕ್ಕೆ ನಿಜವಾಗಿ ಬಳಸಲಾಗಿತ್ತು. ಅಂದರೆ, ಒಟ್ಟು ಬಿಡುಗಡೆ ಮಾಡಿದ ಆಹಾರಧಾನ್ಯಗಳ ಪ್ರಮಾಣದ ಶೇ. 64.3ರಷ್ಟೇ ಕಾರ್ಯಕ್ರಮಕ್ಕೆ ಬಳಸಲಾಗಿತ್ತು. ಆದರೆ ಪ. ಬಂಗಾಳದಲ್ಲಿ ಕಾರ್ಯಕ್ರಮಕ್ಕೆ 1.16 ಲಕ್ಷ ಮೆ. ಟನ್ ಆಹಾರಧಾನ್ಯಗಳನ್ನು ನಿಜವಾಗಿ ಬಳಸಲಾಗಿತ್ತು. ಅಂದರೆ, ಒಟ್ಟು ಬಿಡುಗಡೆ ಮಾಡಿದ ಆಹಾರಧಾನ್ಯಗಳ ಪ್ರಮಾಣದ ಶೇ. 70.1 ರಷ್ಟು ಕಾರ್ಯಕ್ರಮಕ್ಕೆ ಬಳಸಲಾಗಿತ್ತು. ಪ. ಬಂಗಾಳ ರಾಜ್ಯಸರಕಾರವು ಜಿಲ್ಲೆಗಳಿಂದ ಬಂದ ವರದಿಯ ಪ್ರಕಾರ ಕಾರ್ಯಕ್ರಮಕ್ಕೆ ಬಳಸಿದ ಆಹಾರಧಾನ್ಯಗಳ ಪ್ರಮಾಣಕ್ಕೆ ದೃಢಪತ್ರಗಳನ್ನೂ ನೀಡಿತ್ತು.

ಇದರಿಂದ ತಿಳಿದುಬರುವುದೇನೆಂದರೆ, ಅಖಿಲಭಾರತ ಮಟ್ಟದಲ್ಲಿ 'ಕೆಲಸಕ್ಕೆ-ಕಾಳು' ಕಾರ್ಯಕ್ರಮಕ್ಕಾಗಿ ಆಹಾರಧಾನ್ಯಗಳನ್ನು ಹೆಚ್ಚು ಪ್ರಮಾಣದಲ್ಲಿ ಬಿಡುಗಡೆ ಮಾಡಿದ್ದರೂ, ಅವುಗಳನ್ನು ಬಳಸಿದ ಪ್ರಮಾಣವು ಕಡಿಮೆಯಾಗಿತ್ತು. ಆದರೆ, ಪ. ಬಂಗಾಳದಲ್ಲಿ ಈ ಕಾರ್ಯಕ್ರಮಕ್ಕೆ ಆಹಾರಧಾನ್ಯಗಳನ್ನು ಕಡಿಮೆ ಪ್ರಮಾಣದಲ್ಲಿ ಬಿಡುಗಡೆ ಮಾಡಿದ್ದರೂ, ಅವುಗಳನ್ನು ಬಳಸಿದ ಪ್ರಮಾಣವೂ ಹೆಚ್ಚಾಗಿತ್ತು. ಮಾನ್ಯ ಮಂತ್ರಿಗಳಿಗೆ ಇದು ತಿಳಿದಿರಬೇಕು.

'ಕೆಲಸಕ್ಕೆ-ಕಾಳು'ಕಾರ್ಯಕ್ರಮದಲ್ಲಿ ವ್ಯೆಯಕ್ತಿಕ ಹಾಗೂ ರಾಜಕೀಯ ಆಧಾರದಲ್ಲಿ ಪಕ್ಷಪಾತವಾಗುತ್ತಿದೆ ಎಂದು ಕೇಂದ್ರ ಕೃಷಿ ಮಂತ್ರಿಗಳ ಇನ್ನೊಂದು ಅಪವಾದ. ಉತ್ತರವಾಗಿ ಪ. ಬಂಗಾಳದ ಮುಖ್ಯ ಮಂತ್ರಿ ಕಾಂ. ಜ್ಯೋತಿಬಸು ಪಕ್ಷಪಾತವಾಗುತ್ತಿದೆ ಎನ್ನಲಾದ ತಕರಾರುಗಳ ನಿರ್ದಿಷ್ಟ ವಿವರಗಳನ್ನು ಕೇಂದ್ರ ಕೃಷಿ ಮಂತ್ರಿಗಳಿಂದ ಕೇಳಿದ್ದಾರೆ. ಅವುಗಳ ವಿಚಾರಣೆ ನಡೆಸುವುದಾಗಿ ಆಶ್ವಾಸನೆ ನೀಡಿದ್ದಾರೆ. ಆದರೆ, ಕೇಂದ್ರ ಕೃಷಿ ಮಂತ್ರಿಗಳಿಂದ ಉತ್ತರವಿಲ್ಲ! ಅವರು ತಮ್ಮ ನಿರಾಧಾರವಾದ ಆಪಾದನೆಗಳನ್ನು ಪುನರುಚ್ಚರಿಸುತ್ತಲೇ ಇದ್ದಾರೆ!

ಈ ಸಂದರ್ಭ, ಪ. ಬಂಗಾಳದಲ್ಲಿ 'ಕೆಲಸಕ್ಕೆ-ಕಾಳು' ಕಾರ್ಯಕ್ರಮ ಕಾರ್ಯಗತಗೊಳಿಸಿದುದರ ಕುರಿತು ಆರ್ಥಿಕ ಮತ್ತು ಅಂಕಿಸಂಖ್ಯೆಗಳ ನಿರೀಕ್ಷಣಾ ಸಂಸ್ಥೆಯೊಂದು(B E S S S) ನಡೆಸಿದ ಅಧ್ಯಯನವನ್ನು ನೆನಪಿಗೆ ತಂದುಕೊಳ್ಳಬೇಕಾಗುವುದು. ಈ ಸಂಸ್ಥೆಯು ನಡೆಸಿದ 600 ಕಾರ್ಯಕ್ರಮಗಳ ಅಧ್ಯಯನದಲ್ಲಿ ಕೇವಲ ಎರಡು ಕಾರ್ಯಕ್ರಮಗಳಲ್ಲಿ ರಾಜಕೀಯ ಹಸ್ತಕ್ಷೇಪದ ಮತ್ತು ಪಕ್ಷಪಾತದ ತಕರಾರುಗಳಿದ್ದವು. ಆದರೆ, ಈ ತಕರಾರುಗಳು ನಿರ್ದಿಷ್ಟವಾಗಿ ಸಾಬೀತಾಗಲಿಲ್ಲ. ಈ ಸಂಸ್ಥೆಯ ಅಧ್ಯಯನದ ಪೂರ್ಣ ವರದಿಯು ಕೇಂದ್ರ ಕೃಷಿ ಮಂತ್ರಿಗಳಿಗೆ ತಲುಪಿರುವುದಾದರೂ, ಪುನಃ ಅವರು ತಮ್ಮ ಖಾತೆಯ ಹಿರಿಯ ಅಧಿಕಾರಿಗಳನ್ನು ಪ. ಬಂಗಾಳಕ್ಕೆ ಈ ವಿಷಯದ ಕುರಿತು ಇನ್ನಷ್ಟು ತನಿಖೆ ನಡೆಸಲು ಕಳುಹಿಸಿದರು. ಸ್ಥಳೀಯ ಭಾಷೆಯ ಪರಿಚಯವಿಲ್ಲದಿದ್ದುದರಿಂದಲೂ, ಸಮಯದ ಅಭಾವದಿಂದಲೂ, 'ಕೆಲಸಕ್ಕೆ-ಕಾಳು' ಕಾರ್ಯಕ್ರಮ ಕಾರ್ಯಗತಗೊಳಿಸಿದ ಕುರಿತು ಆಳವಾದ ಅಧ್ಯಯನ ಮಾಡಲು ತಮಗೆ ಸಾಧ್ಯವಾಗಲಿಲ್ಲವೆಂದೂ, ಸರ್ವಸಾಮಾನ್ಯವಾಗಿ ಕಾಯಕ್ರಮವು ತೃಪ್ತಿಕರವಾಗಿಯೇ ನಡೆದುಕೊಂಡು ಬರುತ್ತಿದೆ ಎಂದೂ, ರಾಜಕೀಯ ಹಸ್ತಕ್ಷೇಪವಾಗಲೀ ಸ್ವಜನ ಪಕ್ಷಪಾತವಾಗಲೀತಮ್ಮ ಗಮನಕ್ಕೆ ಬರಲಿಲ್ಲವೆಂದೂ, ಕೇಂದ್ರ ಕೃಷಿ ಖಾತೆಯ ಅಧಿಕಾರಿಗಳು ವರದಿಮಾಡಿದ್ದಾರೆ.

ಕೇಂದ್ರ ಕೃಷಿ ಮಂತ್ರಿಗಳು ಕೇಂದ್ರ ರಾಜ್ಯ ಸಂಬಂಧಗಳ ಎಲ್ಲಾ ಸಂಪ್ರದಾಯಗಳನ್ನ ಉಲ್ಲಂಘಿಸಿದ್ದಾರೆ. ಅವರ ಆದೇಶದಂತೆ, ಅವರ ಖಾತೆಯ ಅಡಿಶನಲ್ ಸೆಕ್ರೆಟರಿ ಎಸ್. ಪಿ. ಮುಖರ್ಜಿಯವರು ಪ. ಬಂಗಾಳದ ಚೀಫ್ ಸೆಕ್ರೆಟರಿ ಎ. ಕೆ. ಸೇನ್‌ಅವರಿಗೆ ಟೆಲೆಕ್ಸ್ ಸಂದೇಶ ಕಳುಹಿಸಿದರು. ಮಂತ್ರಿಗಳು ರಾಜ್ಯಕ್ಕೆ ಬರಗಾಲ ಪರಿಸ್ಥಿತಿ ಹಾಗೂ ಪರಿಹಾರ ಕಾರ್ಯಕ್ರಮಗಳ ಕುರಿತು, ಮುಖ್ಯವಾಗಿ 'ಕೆಲಸಕ್ಕೆ-ಕಾಳು'ಕಾರ್ಯಕ್ರಮದ ಕುರಿತು ಮತ್ತು ಅದಕ್ಕಾಗಿ ಬೇಕಾದ ಆಹಾರ ಧಾನ್ಯಗಳ ಪೂರೈಕೆಯ ಕುರಿತು ರಾಜ್ಯದ ಅಧಿಕಾರಿಗಳೊಂದಿಗೆ ಚರ್ಚಿಸಲು ಅಪೇಕ್ಷಿಸುವರೆಂದು ತಿಳಿಸಿದರು. ವಿಚಾರವಿನಿಮಯಕ್ಕಾಗಿ ಚೀಫ್ ಸೆಕ್ರೆಟರಿಯವರು ರಾಜ್ಯದ ಇತರ ಅಧಿಕಾರಿಗಳೊಂದಿಗೆ ಹಾಜರಿರಬೇಕೆಂದು ತಿಳಿಸಿದರು. ಆದರೆ, ರಾಜ್ಯಕ್ಕೆ ಭೇಟಿನೀಡಿದ ಕೇಂದ್ರ ಕೃಷಿ ಮಂತ್ರಿಗಳು ರಾಜ್ಯದ ಮುಖ್ಯಮಂತ್ರಿಗೆ ಈ ವಿಷಯ ಬರೆಯಲೂ ಇಲ್ಲ. ರಾಜ್ಯದ ಯಾವ ಮಂತ್ರಿಗಳನ್ನೂ ಭೇಟಿಯಾಗುವ ಸೌಜನ್ಯವನ್ನೂ ತೋರಿಸಲಿಲ್ಲ. ಆದರೂ, ಪ. ಬಂಗಾಳದ ಯಾವ ಮಂತ್ರಿಯೂ ತನ್ನನ್ನು ಭೇಟಿಯಾಗಲಿಲ್ಲ ಎಂದು ಕೇಂದ್ರ ಕೃಷಿ ಮಂತ್ರಿಗಳು ಆಪಾದಿಸಿ ತನ್ನ ಉದ್ಧಟತನವನ್ನು ತೋರಿಸಿದ್ದಾರೆ.

ರಾಜ್ಯ ಮಂತ್ರಿಗಳು ಕೇಂದ್ರ ಮಂತ್ರಿಗಳ ಗುಮಾಸ್ತರಲ್ಲ. ಕೇಂದ್ರ ಮಂತ್ರಿಗಳು ರಾಜ್ಯಮಂತ್ರಿಗಳನ್ನು ಭೇಟಿಯಾಗಬೇಕಾದರೆ ಮುಖ್ಯಮಂತ್ರಿಗೆ ಅಥವಾ ಸಂಬಂಧಪಟ್ಟ ಮಂತ್ರಿಗಳಿಗೆ ಮುಂಚಿತವಾಗಿ ಬರೆದು ತಿಳಿಸಬೇಕಾಗಿತ್ತು ಎಂದು ಕೇಂದ್ರ ಮಂತ್ರಿಗಳ ಆಪಾದನೆಗಳಿಗೆ ತೀಕ್ಷ್ಣವಾಗಿ ಪ್ರತಿಕ್ರಿಯೆ ವ್ಯಕ್ತಪಡಿಸುತ್ತಾ ರಾಜ್ಯ ಹಣಕಾಸು ಮಂತ್ರಿ ಡಾ॥ ಅಶೋಕ ಮಿತ್ರ ಹೇಳಿದರು. ಮುಖ್ಯಮಂತ್ರಿ ಕಾಂ. ಜ್ಯೋತಿಬಸು ಕೂಡಾ ಕೇಂದ್ರ ಮಂತ್ರಿಗಳ ಮನೋವೃತ್ತಿಯ ಕುರಿತು ತಮ್ಮ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ರಾಜ್ಯ ಮುಖ್ಯಮಂತ್ರಿಗಳ ಹಾಗೂ ಮಂತ್ರಿಗಳನ್ನು ಅಲಕ್ಷಿಸಿ, ಕೇಂದ್ರ ಮಂತ್ರಿಗಳು ನೇರವಾಗಿ ರಾಜ್ಯದ ಅಧಿಕಾರಿಗಳೊಂದಿಗೆ ವ್ಯವಹರಿಸುವುದು ತೀರ ಆಕ್ಷೇಪಣೀಯವೂ ಅಸೌಜನ್ಯವೂ ಆಗಿದೆ.

●

ರೈತಸಂಘದ ಸಭೆ

ಕಾಸರಗೋಡು ತಾಲೂಕು ಮೀಂಜ ಪಂಚಾಯತಿನ ಕಡಂಬಾರು ಗ್ರಾಮ ರೈತಸಂಘದ ಸಭೆಯು ಮೇ 23ರಂದು ಮಂಜೇಶ್ವರ ಪಂಚಾಯತು ಅಧ್ಯಕ್ಷ ಕಾಂ. ಬಿ. ಯಂ. ರಾಮಯ್ಯ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು.

ಕೇರಳದ ಎಡ ಪ್ರಜಾಪ್ರಭುತ್ವರಂಗ ಸರಕಾರವು 1980-81ನೇ ವರ್ಷದ ಬಜೆಟ್‌ನಲ್ಲಿ ಅಳವಡಿಸಿರುವ ಹಲವಾರು ಪ್ರಗತಿಪರ ಯೋಜನೆಗಳ ವಿವರಗಳನ್ನು ನೀಡಿದ ಸಭಾಧ್ಯಕ್ಷರು ಈ ಯೋಜನೆಗಳ ಪ್ರಯೋಜನವನ್ನು ಪಡೆಯಲು ರೈತರು-ಮಜೂರರು ಸಂಘಟಿತರಾಗಬೇಕೆಂದು ಕರೆ ನೀಡಿದರು. ಕೇರಳ ಸೋಶಿಯಲಿಸ್ಟ್ ಯುವಜನ ಫೆಡರೇಷನ್‌ನ ಮಂಜೇಶ್ವರ ಬ್ಲಾಕ್ ಸಮಿತಿಯ ಕಾರ್ಯದರ್ಶಿ ಕಾಂ. ಯು. ವಸಂತನವರು ಮಾತನಾಡಿ, ರೈತರು ಸಂಘಟಿತರಾದರೆ ಮಾತ್ರ ತಮ್ಮ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸಾಧ್ಯವೆಂದು ತಿಳಿಸಿದರು.

ಸಭೆಯಲ್ಲಿ ಕೆ. ಕುಂಇರಾಲಿ ಬ್ಯಾರಿ (ಅಧ್ಯಕ್ಷ), ಕೆ. ಮೋನಪ್ಪ ಹೆಗ್ಡೆ, ಕೆ. ದೂಮಣ್ಣ ಶೆಟ್ಟಿ (ಉಪಾಧ್ಯಕ್ಷರುಗಳು) ಕೆ. ತ್ಯಾಂಪಣ್ಣ ಪೂಜಾರಿ (ಕಾರ್ಯದರ್ಶಿ) ಕೆ. ಅಮ್ಮುಂಞ ಶೆಟ್ಟಿ, ಕೆ. ಸುಬ್ಬಸಮಲ್ಯ (ಉಪಕಾರ್ಯದರ್ಶಿಗಳು) ಕೆ. ಕೋಟ್ಯಪ್ಪ ಪೂಜಾರಿ, ಕೆ. ಕುಟ್ಟಿ ಬ್ಯಾರಿ, ಕೆ. ರಾಮಣ್ಣ ಶೆಟ್ಟಿ, ಕೆ. ಮೋಣಬ್ಯಾರಿ (ಸದಸ್ಯರುಗಳು) ಇವರುಗಳನ್ನೊಳಗೊಂಡ ಕಡಂಬಾರು ಗ್ರಾಮ ರೈತಸಂಘದ ಸಮಿತಿಯನ್ನು ರಚಿಸಲಾಯಿತು.

○

ವಾಮರಂಗ ಸರ್ಕಾರಗಳು ತೋರಿಸುತ್ತಿರುವ ಪರ್ಯಾಯ ಮಾರ್ಗ

ಪಶ್ಚಿಮ ಬಂಗಾಳದ ವಾಮರಂಗ ಸರ್ಕಾರಕ್ಕೆ ಈ ಜೂನ್ 80ಕ್ಕೆ ಮೂರು ವರ್ಷಗಳು ತುಂಬುತ್ತವೆ. ತ್ರಿಪುರದ ಸರ್ಕಾರಕ್ಕೆ 80ರ ಜನವರಿಗೆ ಎರಡು ವರ್ಷ ತುಂಬಿದೆ. ಕೇರಳದ ವಾಮರಂಗ ಸರ್ಕಾರ ಇತ್ತೀಚೆಗೆ ತನ್ನ ಮೊದಲ [illegible] ತಿಂಗಳನ್ನು ಮುಗಿಸಿದೆ. ಜನಪರವಾದ ನೀತಿಗಳು ಮತ್ತು ಧೋರಣೆಗಳಿಂದ ಈ ಮೂರು ಸರ್ಕಾರಗಳೂ ತಮ್ಮ ರಾಜ್ಯದ ಜನಸಾಮಾನ್ಯರ ಬದುಕನ್ನು ಹಸನು ಮಾಡಲು ಶ್ರಮಿಸುತ್ತಿವೆ. ಆ ಬಗ್ಗೆ ಅಲ್ಲಿನ ಜನತೆಗೂ ಭರವಸೆಯಿದೆ. ಸದ್ಯದ ಸಂವಿಧಾನದ ಚೌಕಟ್ಟಿನೊಳಗೆ, ಆರ್ಥಿಕ-ಸಾಮಾಜಿಕ ರಚನೆಯೊಳಗೆ ಮೂಲಭೂತ ಬದಲಾವಣೆಯನ್ನು ತರಲು ಸಾಧ್ಯವಿಲ್ಲ ಎಂಬ ಅರಿವು ಸ್ಪಷ್ಟವಾದಿದ್ದರೂ ಜನತೆಯ ಬದುಕನ್ನು ಸಹನೀಯವಾದಿಸುವ ಪ್ರಯತ್ನಗಳು ನಡೆಯುತ್ತಿವೆ.

ಪಶ್ಚಿಮ ಬಂಗಾಳ :

ಪಶ್ಚಿಮ ಬಂಗಾಳದ ಚರಿತ್ರೆಯಲ್ಲಿ ಕಮ್ಯುನಿಸ್ಟರಿಗೆ ವಿಶೇಷ ಸ್ಥಾನವಿದೆ, ವಾಮರಂಗದೊಡನೆ ಅಲ್ಲಿನ ಜನ ತಮ್ಮನ್ನು ಕಾವು ಗುರುತಿಸಿಕೊಂಡಿದ್ದಾರೆ. ಆದ್ದರಿಂದಲೇ ಅವರು ಇತ್ತೀಚಿನ ಲೋಕಸಭಾ ಚುನಾವಣೆಯಲ್ಲೂ ವಾಮಪಂಥಕ್ಕೆ ಮತನೀಡಿದ್ದಾರೆ. ಈಗಿನ ಜ್ಯೋತಿಬಸು ಸರ್ಕಾರದ ಹಿಂದಿನ ವರ್ಷಗಳು ಕಾಂಗ್ರೆಸ್ಸಿನ ಅರೆಫ್ಯಾಸಿಸ್ಟ್ ದಬ್ಬಾಳಿಕೆಯ ಕರಾಳ ವರ್ಷಗಳು. ರಾಜ್ಯದ ಬರಿದಾದ ಬೊಕ್ಕಸ, ಶಿಥಿಲ ಆರ್ಥಿಕತೆ, ಅಶಿಸ್ತಿನ ಆಡಳಿತ ಇವು ಹಿಂದಿನ ಸರ್ಕಾರ ಬಿಟ್ಟು ಹೋಗಿರುವ ಕೆಟ್ಟ ಆಸ್ತಿ. ಇದರ ಜೊತೆಗೆ ವಾಮರಂಗ ಸರ್ಕಾರವು 1978ರ ಪ್ರವಾಹದ ಹಾವಳಿ, 1924ರಿಂದೀಚೆಗೆ ಅತಿ ವಿಕೃತವಾದ 1979ರ ಬರಗಾಲ ಇವುಗಳನ್ನು ಎದುರಿಸಬೇಕಾಯಿತು. ಆದರೆ ತನ್ನ ಜನಬಲದ ಆಧಾರದಿಂದ ಸರ್ಕಾರ ಇವುಗಳನ್ನು ದೃಢವಾಗಿ ಎದುರಿಸಿತು.

1971ರಿಂದ 1977ರವರೆಗಿನ ಅವಧಿಯಲ್ಲಿ ಬಂಗಾಳದಲ್ಲಿ ಕಾನೂನಿನ ಹೆಸರಿರಲಿಲ್ಲ. ಜನತೆಯ ಪ್ರಜಾಪ್ರಭುತ್ವವಾದಿ ಹಕ್ಕುಗಳಿಗೆ ವಿಪರೀತ ಧಕ್ಕೆ ಒದಗಿತ್ತು. ವಾಮರಂಗ ಸರ್ಕಾರ ತನ್ನ ಚುನಾವಣಾ ಪ್ರತಿಜ್ಞೆಯ ಪ್ರಕಾರ ಇವನ್ನು ಪುನಃಸ್ಥಾಪಿಸಿತು. ಎಲ್ಲ ರಾಜಕೀಯ ಖೈದಿಗಳ ಬಿಡುಗಡೆ ಆಗಿದ್ದು, ನ್ಯಾಯಾಲಯಗಳ ರಾಜಕೀಯ ಮೊಕದ್ದಮೆಗಳೆಲ್ಲವೂ ರದ್ದಾಗಿವೆ. ದಾಸ್ತಾನುಗಾರರು, ಕಾಳಸಂತೆಕೋರರ ವಿರುದ್ಧ ಕೇಂದ್ರದ ಆದೇಶದಂತೆ ಪ. ಬಂಗಾಳ ಸರ್ಕಾರ ಸ್ಥಾನಬದ್ಧತಾ ಕಾಯಿದೆಯನ್ನು ಅನುಸರಿಸುತ್ತಿಲ್ಲ. ಸದ್ಯಕ್ಕಿರುವ ಬೇರೆ ಕಾಯಿದೆಗಳಿಂದಲೇ ಅವರನ್ನು ತಡೆಗಟ್ಟಲು ಪ್ರಯತ್ನಿಸುತ್ತಿದೆ. ಕಾರ್ಮಿಕರ ಅಥವಾ ಕೃಷಿ ಕಾರ್ಮಿಕರ ವಿವಾದಗಳಲ್ಲಿ ಪೋಲೀಸರು ಮಾಲೀಕರ ಮತ್ತು ಭೂಮಾಲೀಕರ ಪಕ್ಷ ವಹಿಸುತ್ತಿಲ್ಲ.

ರಾಜ್ಯದ ಆರ್ಥಿಕ ಏಳಿಗೆಯನ್ನು ಸಾಧಿಸಲು ವಾಮರಂಗ ಸರ್ಕಾರವು 36 ಅಂಶಗಳ ಕಾರ್ಯಕ್ರಮವನ್ನು ಯೋಜಿಸಿಕೊಂಡಿದೆ. ಭ್ರಷ್ಟಾಚಾರವನ್ನು ಕಡಿಮೆಮಾಡಲು ಎಲ್ಲ ಕ್ರಮಗಳನ್ನು ಕೈಗೊಂಡಿದೆ. ರಾಜಕೀಯ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ, ಪ್ರಸ್ತುತ ಕೇಂದ್ರ-ರಾಜ್ಯ ಸಂಬಂಧಗಳು ತೀವ್ರ ಅಸಮಾನತೆಯನ್ನು ತರುತ್ತಿವೆ. ಆದ್ದರಿಂದ ಅಧಿಕಾರ ವಹಿಸಿಕೊಂಡ ಆರು ತಿಂಗಳಲ್ಲೇ ವಾಮರಂಗ ಸರ್ಕಾರವು ಆ ಬಗ್ಗೆ ಒಂದು ಮನವಿಯನ್ನು ಸಲ್ಲಿಸಿದೆ. ಕೇಂದ್ರ-ರಾಜ್ಯ ಸಂಬಂಧಗಳ ಬಗ್ಗೆ ಮೊದಲು ದನಿಎತ್ತಿದ ಕೀರ್ತಿ ಪ. ಬಂಗಾಳದ ವಾಮರಂಗ ಸರ್ಕಾರದ್ದಾಗಿದೆ.

ಪ್ರಜಾಪ್ರಭುತ್ವವಾದಿ ವಿಕೇಂದ್ರೀಕರಣವನ್ನು ಕಾರ್ಯಗತಗೊಳಿಸಲು ಪಂಚಾಯತುಗಳ ಚುನಾವಣೆ ನಡೆಸಲಾಗಿದೆ. ಗ್ರಾಮೀಣ ಅಭಿವೃದ್ಧಿಯಲ್ಲಿ ಪಂಚಾಯತಿಗಳು ಪ್ರಮುಖ ಪಾತ್ರ ವಹಿಸುತ್ತಿವೆ. ಪ್ರವಾಹ ಪರಿಹಾರ, ಪುನರ್ವಸತಿ ಮುಂತಾದ ಕೆಲಸಗಳನ್ನು ಸರ್ಕಾರ ಕಂಟ್ರಾಕ್ಟರುಗಳಿಗೆ ವಹಿಸದೆ ಈ ಪಂಚಾಯತಿಗಳಿಗೆ ವಹಿಸಿದೆ. ದುಡಿಮೆಗಾಗಿ ಧಾನ್ಯ, ಗ್ರಾಮೀಣ ಕಾರ್ಯಕ್ರಮಗಳು ಮತ್ತು ಪುನರ್ವಸತಿ–ಈ ಯೋಜನೆಗಳು ಇವು ನಿರ್ವಹಿಸುತ್ತವೆ. ಸರ್ಕಾರ ಮತ್ತು ವಿವಿಧ ಸಂಸ್ಥೆಗಳ ಪ್ರಯತ್ನದಿಂದ ಯಾವ ರೀತಿಯ ಸಾಂಕ್ರಾಮಿಕ ರೋಗವೂ ಹರಡಲಿಲ್ಲ. ಇದರಿಂದ ಎಲ್ಲ ಜನರೂ ವಸತಿಗಾಗಿ ಕಲ್ಕತ್ತೆಗೆ ನುಗ್ಗುವುದು ತಪ್ಪಿದಂತಾಗಿದೆ.

“ಬರ್ಗಾಯೋಜನೆ”ಯ ಪ್ರಕಾರ ಗೇಣಿದಾರರ ಹಕ್ಕುಗಳನ್ನು ಕಾಪಾಡಲು ಅವರ ಹೆಸರುಗಳನ್ನು ನೋಂದಾಯಿಸಲಾಗಿದೆ. ಇದುವರೆಗೆ 10 ಲಕ್ಷ ಹೆಸರುಗಳ ನೋಂದಣಿ ಆಗಿದೆ. ಸಣ್ಣ ಮತ್ತು ಮಧ್ಯಮ ರೈತರಿಗೆ ಭೂಕಂದಾಯ ವಿನಾಯ್ತಿ ನೀಡಲಾಗಿದೆ. ಪ. ಬಂಗಾಳ ಭೂಮಿ (ಫಾರಂ ಹಿಡುವಳಿ) ಕಂದಾಯ ಮಸೂದೆ 1979ರ ಪ್ರಕಾರ ಅನೇಕ ಸಣ್ಣ ರೈತರಿಗೆ ಕಂದಾಯ ವಿನಾಯ್ತಿ ದೊರೆತು ಭಾರಿ ಜಮೀನುದಾರರ ಕಂದಾಯ ಹೆಚ್ಚಾಗಿದೆ. ಅಕ್ರಮ ಜಮೀನನ್ನು ಸರ್ಕಾರ ವಶಪಡಿಸಿಕೊಂಡು ಭೂಹೀನರಿಗೆ ಹಂಚಲಿದೆ. ವಸತಿ ಇರುವ ಜಮೀನಿನ ಹಕ್ಕುಗಳನ್ನು ವಾಸಿಸುವವರಿಗೇ ನೀಡುವ ಮಸೂದೆಯನ್ನು ಜಾರಿಮಾಡಲು ಸರ್ಕಾರ ಯೋಚಿಸುತ್ತಿದೆ. ಕನಿಷ್ಠ ಕೂಲಿಯನ್ನು ಕಡ್ಡಾಯ ಮಾಡುವ ಸಲುವಾಗಿ ಸಂಘಟಿತ ಚಳುವಳಿಗಳು ಕೃಷಿರಂಗದಲ್ಲಿ ನಡೆಯುತ್ತಿವೆ.

ದೇಶದ ತುಂಬ ಹರಿಜನರ ಮೇಲಿನ ಹಲ್ಲೆಗಳ ಸುದ್ದಿ ತುಂಬಿದೆ. ಆದರೆ ಪ. ಬಂಗಾಳದಲ್ಲಿ ಅಂಥ ಒಂದು ಘಟನೆಯೂ ನಡೆದಿಲ್ಲ. ಪೋಲೀಸರು ತಮ್ಮ ಬೇಡಿಕೆಗಳಿಗಾಗಿ ಇಲ್ಲಿ ಚಳುವಳಿ ನಡೆಸಲಿಲ್ಲ. ಅವರ ಸಂಘದವರು ಸರ್ಕಾರದೊಡನೆ ಮಾತುಕತೆ ನಡೆಸಿ ಒಪ್ಪಂದಕ್ಕೆ ಬಂದಿದ್ದಾರೆ. ರಾಜ್ಯದಲ್ಲಿ ಕಾನೂನು ಮತ್ತು ಶಿಸ್ತಿಗೆ ಭಂಗ ಬಂದಿಲ್ಲ. ಸರ್ಕಾರವು ಕಾಂಗ್ರೆಸ್ (ಐ)ನ “ಅಸ್ಸಾಂ ದಿಗ್ಬಂಧನ”ವನ್ನು ಯಶಸ್ವಿಯಾಗಿ ತಡೆಗಟ್ಟಿದ ರೀತಿ ಎಲ್ಲರ ಪ್ರಶಂಸೆ ಗಳಿಸಿದೆ. ನಾಡಿಯಾ ಮತ್ತು ಇಸ್ಲಾಂಪುರ ಜಿಲ್ಲೆಗಳ ಘಟನೆಗಳನ್ನು ತಡೆದ ರೀತಿ ಪತ್ರಿಕೆಗಳ ಹೊಗಳಿಕೆಗೆ ಪಾತ್ರವಾಗಿದೆ.

ಪ. ಬಂಗಾಳದ ವಾಮರಂಗ ಸರ್ಕಾರ ಅಧಿಕಾರ ವಹಿಸಿಕೊಂಡಾಗ ರಾಜ್ಯದಲ್ಲಿದ್ದ ತೀವ್ರ ಸಮಸ್ಯೆ ಎಂದರೆ ವಿದ್ಯುಚ್ಛಕ್ತಿ ಕೊರತೆ, ಹಿಂದಿನ ಸರ್ಕಾರದ ದೂರದೃಷ್ಟಿ ಅಭಾವದ ಫಲವಾಗಿ ಈ ಸಮಸ್ಯೆ ಉದ್ಭವಿಸಿದೆ, ಆದ್ದರಿಂದ ಈ ಸರ್ಕಾರವು ರಾಜ್ಯದಲ್ಲಿ ವಿದ್ಯುಚ್ಛಕ್ತಿ ಉತ್ಪಾದನಾ ಕೇಂದ್ರಗಳನ್ನು ಶೀಘ್ರದಲ್ಲಿ ತೆರೆಯಲು ಆರಂಭಿಸಿ, 1980ರ ಕೊನೆಗೆ ವಿದ್ಯುಚ್ಛಕ್ತಿ ಕೊರತೆಯನ್ನು ನೀಗಿಸುವ ಪ್ರಯತ್ನ ಮಾಡುತ್ತಿದೆ.

ವಾಮರಂಗ ಸರ್ಕಾರವು ಕೇಂದ್ರದ ಒಪ್ಪಿಗೆ ಪಡೆದು 1979-80ರಲ್ಲಿ 480 ಕೋಟಿರೂಪಾಯಿಗಳ ವಾರ್ಷಿಕ ಯೋಜನೆ ಆರಂಭಿಸಿದೆ. ಹಿಂದಿನ ಸರ್ಕಾರದ ಯೋಜನಾ ವೆಚ್ಚಕ್ಕಿಂತ ಇದು ಶೇ. 30ರಷ್ಟು ಹೆಚ್ಚಿದೆ. 1980-81ಕ್ಕೆ 580 ಕೋಟಿ ರೂ. ಗಳ ಯೋಜನೆ ಕಾರ್ಯಗತವಾಗಲಿದೆ. ಕೃಷಿ, ನೀರಾವರಿ, ವಿದ್ಯುಚ್ಛಕ್ತಿಗೆ ಇಲ್ಲಿ ಆದ್ಯತೆ ಕೊಡಲಾಗಿದೆ.

ಬಂಗಾಳಿ ಭಾಷೆ ಈಗ ಎಲ್ಲ ಕಚೇರಿಗಳ ವ್ಯವಹಾರ ಭಾಷೆಯಾಗಿದೆ. ಡಾರ್ಜಿಲಿಂಗ್ ಸುತ್ತಲಿನ ಬೆಟ್ಟಗಾಡಿನಲ್ಲಿ ನೇಪಾಳಿ ಭಾಷೆಯಲ್ಲಿ ಆಡಳಿತ ನಡೆಯುತ್ತಿದೆ. ಸಂವಿಧಾನದ ಎಂಟನೇ ವಿಧಿಯಲ್ಲಿ ನೇಪಾಳಿ ಭಾಷೆಯನ್ನು ಸೇರಿಸಲು ಸರ್ಕಾರ ಕೇಂದ್ರಕ್ಕೆ ಶಿಫಾರಸು ಮಾಡಿದೆ. ಪ್ರತಿ ಸಬ್‌ಡಿವಿಜನ್‌ನಲ್ಲಿ ಒಂದು ಉದ್ಯೋಗ ವಿನಿಮಯ ಕೇಂದ್ರ ತೆರೆಯಲು ಸರ್ಕಾರ ನಿರ್ಧರಿಸಿದೆ. ಸುಮಾರು 300,000 ವ್ಯಕ್ತಿಗಳು ಈಗ ನಿರುದ್ಯೋಗ ಭತ್ಯ ಪಡೆಯುತ್ತಿದ್ದಾರೆ. ಹತ್ತನೇ ತರಗತಿಯವರೆಗೆ ಶಿಕ್ಷಣ ಉಚಿತವಾಗಿದ್ದು ಈಗ 12ನೆಯ ತರಗತಿಯವರೆಗೆ ಇದನ್ನು ವಿಸ್ತರಿಸಲು ಆಲೋಚಿಸಲಾಗಿದೆ. ಶಿಕ್ಷಣ ಕ್ಷೇತ್ರದಲ್ಲಿನ ಅಶಿಸ್ತು ಮತ್ತು ಅರಾಜಕತೆಗಳನ್ನು ತೊಡೆದು ಹಾಕಲು ಸರ್ಕಾರ ಬದ್ಧವಾಗಿದೆ. ನಿಮ್ನವರ್ಗದ ವಿದ್ಯಾರ್ಥಿಗಳಿಗೆ ವಿಶೇಷ ಸೌಲಭ್ಯಗಳು ಇವೆ.

ದೇಶದಲ್ಲಿ ಮೊದಲಬಾರಿಗೆ, ಗ್ರಾಮೀಣರಿಗೆ ಹೆಚ್ಚು ಸಾಲ ನೀಡುವಂತೆ ಬ್ಯಾಂಕುಗಳ ಮನವೊಲಿಸಲಾಗಿದೆ. 50,000 ಗೇಣಿದಾರರಿಗೆ ಸಾಲ ನೀಡುವ ಕಾರ್ಯಕ್ರಮ ಉದ್ದೇಶಿಸಲಾಗಿದೆ. 15,000 ದೊಳಗಿನ ಕೃಷಿ ವ್ಯವಹಾರಗಳ ಸ್ಟಾಂಪ್‌ಕರ ಮನ್ನಾ ಮಾಡಲಾಗಿದೆ. ಪ. ಬಂಗಾಳದಲ್ಲಿ ಅತ್ಯಂತ ವಿಶೇಷವೆಂದರೆ ಗ್ರಾಮೀಣ ಅಭಿವೃದ್ಧಿ ಯೋಜನೆಯನ್ನು ಗ್ರಾಮ ಪಂಚಾಯಿತಿಗಳೇ ನಡೆಸುತ್ತವೆ. ಬ್ಯಾಂಕುಗಳು ನೇರವಾಗಿ ಪಂಚಾಯಿತಿಗಳಿಗೆ ಸಾಲ ನೀಡುತ್ತವೆ. ಸೆಣಬು ಬೆಳೆಗಾರರಿಗೆ ಇತ್ತೀಚೆಗೆ ಆದ ತೊಂದರೆಯಿಂದ ಪಾರು ಮಾಡಲು ಸರ್ಕಾರ ಒಂದು ಯೋಜನೆಹಾಕಿ, ಆಯ್ದ ಪಂಚಾಯಿತಿಗಳೇ ಸೆಣಬು ಕೊಳ್ಳುವಂತೆ ಮಾಡಿದೆ.

ರಾಜ್ಯದ ಆರ್ಥಿಕ ಕ್ಷೇತ್ರದಲ್ಲಿ ಹೊಸ ಕೈಗಾರಿಕಾವಲಯಗಳ ಹುಟ್ಟು ಮತ್ತು ಇರುವ ವಲಯಗಳ ವಿಸ್ತರಣೆ ಆಗಿದೆ, ಆರೋಗ್ಯ ಮತ್ತು ಮುಂಜಾಗ್ರತಾ ಸೇವೆಗಳಿಗೆ ಸರ್ಕಾರ ಆದ್ಯತೆ ನೀಡಿ, ಪ್ರತಿ ಹಳ್ಳಿಗೂ ಕುಡಿಯುವ ನೀರಿನ ಸೌಲಭ್ಯ ಒದಗಿಸುವ ಯೋಜನೆ ಹಾಕಿಕೊಂಡಿದೆ

ದುಡಿಮೆಗಾಗಿ ಧಾನ್ಯ ಯೋಜನೆಯಿಂದ 1979-80ರಲ್ಲಿ ನಾಲ್ಕು ತಿಂಗಳವರೆಗೆ 15 ಲಕ್ಷ ಜನರಿಗೆ ಕೆಲಸ ದೊರೆತಿದೆ. ಹಳ್ಳಿಗಳಲ್ಲಿ ಕೆಲಸ ಇಲ್ಲದಿದ್ದಾಗ ಸಂಪಾದನೆಯಿಲ್ಲದೆ ಲೇವಾದೇವಿಗಾರರ ಹಿಡಿತಕ್ಕೆ ಸಿಗುವುದು ಇದರಿಂದ ತಪ್ಪಿದಂತಾಗಿದೆ.

ಸರ್ಕಾರಿ ಉದ್ಯೋಗಿಗಳಿಗೆ ಹೆಚ್ಚಿನ ಭತ್ಯ ನೀಡುವ ಉದ್ದೇಶವಿದೆ, ವೃದ್ಧಾಪ್ಯವೇತನವನ್ನು ಸಣ್ಣ ರೈತರು, ಕೃಷಿ ಕಾರ್ಮಿಕರಿಗೆ ಕೊಡುವ ವಿಶೇಷ ಸೌಲಭ್ಯ ಈ ರಾಜ್ಯದಲ್ಲಿದೆ. ವಿಧವೆ ಮತ್ತು ವೃದ್ಧರ ವೇತನ ಈಗಾಗಲೇ ಜಾರಿಯಲ್ಲಿದೆ. ಕಾರ್ಮಿಕರ ರೈತರ ಕ್ಷೇಮವನ್ನು ಕಾಪಾಡಲು ಸರ್ಕಾರ ಬದ್ಧವಾಗಿದೆ, ರಂಗಭೂಮಿ ಕಲೆಗಳು, ಜಾತ್ರ, ನಾಟಕ ಮುಂತಾದ ಕಲೆಗಳನ್ನು ಪ್ರೋತ್ಸಾಹಿಸುವ ಯೋಜನೆ ಇದೆ. ಪಟ್ಟಭದ್ರ ಹಿತಾಸಕ್ತಿಗಳನ್ನು ನಾಶಮಾಡಿ, ಸಮಾನತೆ ಬೆಳೆಸುವ ಕಾರ್ಯದಲ್ಲಿ ಪ. ಬಂಗಾಳದ ಸರ್ಕಾರ ನಿರತವಾಗಿದೆ. ಅದರಿಂದಲೇ ಸರ್ಕಾರ ಜನಪ್ರಿಯತೆಯನ್ನು ಗಳಿಸಿದೆ.

ತ್ರಿಪುರ :

ಪ. ಬಂಗಾಳದ ವಾಮರಂಗ ಸರ್ಕಾರದ ಹಾಗೆ ತ್ರಿಪುರದ ವಾಮರಂಗ ಸರ್ಕಾರಕ್ಕೂ ಹೆಮ್ಮೆಯ ದಾಖಲೆಗಳಿವೆ. ತ್ರಿಪುರದ ಜನಸಂಖ್ಯೆ ಎರಡೇ ಮಿಲಿಯನ್‌ಗಳಷ್ಟಿದ್ದರೂ ಅದು ದೇಶದ ಅತಿ ಹಿಂದುಳಿದ ರಾಜ್ಯಗಳಲ್ಲೊಂದಾಗಿದೆ. ಕಳೆದ ಕಾಂಗ್ರೆಸ್ ಆಡಳಿತಗಳಲ್ಲಿ ಯಾವ ಮೂಲಭೂತ ಸುಧಾರಣೆಗಳೂ ನಡೆದಿಲ್ಲ. ವಾಮರಂಗ ಸರ್ಕಾರ ಈ ಹಿನ್ನೆಲೆ, ಮಿತಿಗಳಲ್ಲಿ ಅಧಿಕಾರ ಸ್ವೀಕರಿಸಿದೆ.

ವಾಮರಂಗ ಸರ್ಕಾರ ಮೊತ್ತಮೊದಲಿಗೆ ಎಲ್ಲ ರಾಜಕೀಯ ಖೈದಿಗಳನ್ನು ಬಿಡುಗಡೆಮಾಡಿತು. 1972ರವರೆಗಿನ ಆಡಳಿತದ ದುರಾಚಾರಗಳ ವಿಚಾರಣೆ ನಡೆಸಲು ಒಂದು ಆಯೋಗ ನೇಮಿಸಲಾಗಿದೆ.

ಸರ್ಕಾರವು ಉದ್ಯೋಗಿಗಳ ಹಿತಾಸಕ್ತಿ ರಕ್ಷಿಸಲು ಬದ್ಧವಾಗಿದೆ. ಉದ್ಯೋಗಿಗಳ ಸಮನ್ವಯ ಸಮಿತಿಗೆ ಅದು ಮನ್ನಣೆ ನೀಡಿದೆ. ಪೋಲೀಸು ಸಂಘವೂ ಮನ್ನಣೆ ಪಡೆದಿದೆ.

ಜನತೆಯ ಬದುಕಿನ ಬೆನ್ನೆಲುಬಾದ ಕೃಷಿಯಲ್ಲಿ ಸುಧಾರಣೆ ತರಲು ಭೂಸುಧಾರಣೆ ಕ್ರಮಗಳ ಜಾರಿಗೆ ವಿಶೇಷ ಆದ್ಯತೆ ನೀಡಲಾಗಿದೆ. ಗಿರಿಜನರಿಗೆ ಜಮೀನು ಕೊಡಿಸಲು ಕ್ರಮ ಕೈಗೊಳ್ಳಲಾಗಿದೆ. ಜಮೀನು ಪಡೆದ ಗಿರಿಜನರು ಬೇಸಾಯಕ್ಕಾಗಿ ಹಣದ ಸಾಲ ಪಡೆಯುವ ಸೌಲಭ್ಯವಿದೆ. ತ್ರಿಪುರ ಭೂಕಂದಾಯ ಮತ್ತು ಭೂ ಸುಧಾರಣಾ ಕಾಯಿದೆ 1969ರ ಪ್ರಕಾರ ಗೇಣಿದಾರರ, ಸಣ್ಣ ರೈತರ ಹಿತ ಕಾಪಾಡಲು ಅವಕಾಶವಿತ್ತು. 1979ರಲ್ಲಿ ಇದನ್ನು ಪರಿಷ್ಕರಿಸಿ ಅವರ ಹಿತಾಸಕ್ತಿಗಳನ್ನು ರಕ್ಷಿಸಲು ತೀವ್ರ ಕ್ರಮ ಕೈಗೊಳ್ಳಲಾಗಿದೆ. ಕೃಷಿಸಾಲಗಳ ಪಾವತಿಯನ್ನು ರದ್ದುಮಾಡುವ ನಿರ್ಧಾರ ಮಾಡಲಾಗಿದೆ.

ಅಧಿಕಾರ ವಹಿಸಿಕೊಂಡ ಆರು ತಿಂಗಳಲ್ಲೇ ತ್ರಿಪುರ ಸರ್ಕಾರ ಪಂಚಾಯಿತಿಗಳಿಗೆ ಚುನಾವಣೆ ನಡೆಸಿದೆ. ರಾಜ್ಯದಲ್ಲಿ ಮೊದಲ ಬಾರಿಗೆ 689 ಚುನಾಯಿತ ಗ್ರಾಮಪಂಚಾಯಿತಿಗಳು ಕೆಲಸ ನಿರ್ವಹಿಸಲಾರಂಭಿಸಿವೆ,

ಗ್ರಾಮದ ಸಮಸ್ಯೆಗಳನ್ನು ನಿವಾರಿಸಿ, ಸಾರ್ವಜನಿಕ ನಿಧಿ ಬಳಸುವ ಅಧಿಕಾರವನ್ನು ಸರ್ಕಾರ ಅವುಗಳಿಗೆ ಕೊಟ್ಟು ವಿಕೇಂದ್ರೀಕರಣವನ್ನು ಸಾಧಿಸಿದೆ. ದುಡಿಮೆಗಾಗಿ ಧಾನ್ಯ ಯೋಜನೆಯನ್ನು ಗ್ರಾಮಪಂಚಾಯಿತಿಗಳೇ ನಿರ್ವಹಿಸುತ್ತಿವೆ.

ದುಡಿಮೆಗಾಗಿ ಧಾನ್ಯ ಯೋಜನೆಯಿಂದ ಗ್ರಾಮೀಣ ಬಡಜನರ ಬವಣೆ ಕಳೆದ ಎರಡು ವರ್ಷಗಳಿಂದ ಸಾಕಷ್ಟು ತಪ್ಪಿದೆ. ಧಾನ್ಯದ ಜೊತೆ ಕೊಡುವ ಕೂಲಿಯನ್ನೂ ಈಗ ಹೆಚ್ಚಿಸಲಾಗಿದೆ. ನ್ಯಾಯಬೆಲೆ ವ್ಯಾಪಾರದ ವ್ಯವಹಾರವನ್ನು ಈಗ ಪಂಚಾಯಿತಿಗಳೇ ನಿರ್ವಹಿಸುತ್ತಿವೆ. ಸಹಕಾರಿ ಸಂಘಗಳೂ ಇದರಲ್ಲಿ ಸಹಾಯ ಮಾಡುತ್ತಿವೆ. ಕಳೆದ ಎರಡು ವರ್ಷಗಳಿಂದ ಅಕ್ಕಿ, ಗೋಧಿ, ಸಕ್ಕರೆ, ನಿಯಂತ್ರಿತ ಬಟ್ಟೆ, ಕಾಳುಗಳು, ಉಪ್ಪು, ಪಿ.ಓ.ಎಲ್, ವಸ್ತುಗಳು ಮುಂತಾದವನ್ನು ರಾಜ್ಯದಾದ್ಯಂತ ಸಾರ್ವಜನಿಕ ವಿತರಣೆ ವ್ಯವಸ್ಥೆಯ ಮೂಲಕ ಹಂಚಲಾಗಿದೆ,

ಮೀನುಗಾರಿಕೆ ವ್ಯವಸ್ಥೆಯನ್ನು ಈಗ ಪುನರ್ ರೂಪಿಸಲಾಗಿದೆ. ಹಿಂದಿನ ಮಧ್ಯವರ್ತಿಗಳ ಹಿಡಿತ ತಪ್ಪಿಸಿ, ಮೀನುಗಾರರು ಅಥವಾ ಅವರ ಸಹಕಾರಿಗಳಿಗೆ ಗುತ್ತಿಗೆ ಕೊಡಲಾಗುತ್ತಿದೆ. ಮೀನುಗಾರರು ಈಗ ಸಹಕಾರ ಸಂಘ ರಚಿಸಿಕೊಳ್ಳುತ್ತಿದ್ದಾರೆ.

ವೃದ್ಧಾಪ್ಯ ವೇತನ, ಸ್ವಾತಂತ್ರ್ಯ ಹೋರಾಟಗಾರರ ವೇತನ, ಹೋರಾಟದಲ್ಲಿ ಮಡಿದವರ ಕುಟುಂಬಗಳಿಗೆ ವೇತನ, ನಾಲ್ಕನೇ ದರ್ಜೆ ನೌಕರರಿಗೆ ಬಾಡಿಗೆ ರಹಿತ ಮನೆಗಳ ನೀಡಿಕೆ, ಗ್ರಾಮ ಚೌಕಿದಾರರಿಗೆ ವಿಶ್ರಾಂತಿ ವೇತನ, ಪೋಲೀಸು, ಜೈಲು, ಅಗ್ನಿ ಶಾಮಕ ಸಿಬ್ಬಂದಿಗೆ ಹೆಚ್ಚು ಸೌಲಭ್ಯಗಳು, ಸರ್ಕಾರಿ ಸಿಬ್ಬಂದಿಯ ರಜೆಯನ್ನು ಹಣಕ್ಕೆ ಪರಿವರ್ತಿಸಿಕೊಳ್ಳುವ ಸೌಲಭ್ಯ ಮುಂತಾದ ಅನುಕೂಲಗಳನ್ನು ಸರ್ಕಾರ ಕಲ್ಪಿಸಿದೆ.

ತ್ರಿಪುರ ಸರ್ಕಾರವು ಸ್ವಾಯತ್ತ ಜಿಲ್ಲಾ ಸಮಿತಿ ಮಸೂದೆಯನ್ನು ಜಾರಿ ಮಾಡಿರುವುದು ಅತ್ಯಂತ ಪ್ರಮುಖ ಕ್ರಮವಾಗಿದೆ. ಪ್ರತಿಜಿಲ್ಲೆಯಲ್ಲಿ ಗಿರಿಜನ ಅಭಿವೃದ್ಧಿಯನ್ನು ಶೀಘ್ರಗೊಳಿಸಲು ಆಡಳಿತ ವ್ಯವಸ್ಥೆಗೆ ಹೊಸನೋಟ ಕೊಡಲಾಗಿದೆ. ಗಿರಿಜನರು ವಾಸಿಸುವ ದೂರ ಪ್ರದೇಶಗಳಿಗೆ ಇಂಜಿನಿಯರಿಂಗ್ ಕೃಷಿ, ವೈದ್ಯಕೀಯ ಸೌಲಭ್ಯ ಒದಗಿಸಲು ಆಯಾ ಶಾಖೆಗಳ ಜನರನ್ನುಳ್ಳ ತಂಡವೊಂದನ್ನು ನೇಮಿಸಲಾಗಿದೆ,

ದುಡಿಯುವ ಜನತೆಯ ಸ್ಥಿತಿಗತಿಗಳನ್ನು ಸುಧಾರಿಸಲು ಕಳೆದ ಎರಡು ವರ್ಷಗಳಲ್ಲಿ ಅನೇಕ ಕ್ರಮಗಳನ್ನು ಕೈಗೊಳ್ಳಲಾಗಿದೆ. ಕನಿಷ್ಠ ವೇತನಗಳ ಮಸೂದೆಯ ಅನ್ವಯ ಸಲಹಾ ಸಮಿತಿಯನ್ನು ಪುನರ್‌ರೂಪಿಸಲಾಗಿದೆ. ಬೀಡಿ ತಯಾರಿಕೆ, ಸಾರ್ವಜನಿಕ ಮೋಟಾರು ವ್ಯವಸ್ಥೆ, ರಸ್ತೆಕಟ್ಟಡಗಳ ನಿರ್ಮಾಣಗಳ ಕೆಲಸಗಾರರು ಈಗ ಹೆಚ್ಚು ವೇತನ ಪಡೆಯುತ್ತಾರೆ.

ಶಿಕ್ಷಣಕ್ಷೇತ್ರದಲ್ಲಿ ತ್ರಿಪುರ ಸರ್ಕಾರ ಪ್ರಮುಖ ಹೆಜ್ಜೆಗಳನ್ನಿಟ್ಟಿದೆ. ಒಂದರಿಂದ ಐದನೇ ತರಗತಿಯವರೆಗೆ ಓದುತ್ತಿರುವ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಊಟ ನೀಡಲಾಗುತ್ತಿದೆ 12ನೆಯ ತರಗತಿಯವರೆಗೆ ಉಚಿತ ಶಿಕ್ಷಣ ಜಾರಿ ಮಾಡಲಾಗಿದೆ. ನಿಮ್ನ ವರ್ಗ ಮತ್ತು ಜಾತಿಗಳ ವಿದ್ಯಾರ್ಥಿಗಳಿಗೆ ಉಚಿತ ಶಾಲಾದಿರುಸುಗಳನ್ನು ಕೊಡಲಾಗುತ್ತದೆ. ಎಲ್ಲ ಖಾಸಗಿ ಕಾಲೇಜುಗಳನ್ನು ಸರ್ಕಾರವೇ ವಹಿಸಿಕೊಳ್ಳಲಿದೆ, ಅನಕ್ಷರತೆಯನ್ನು ಕಡಿಮೆಮಾಡಲು ಸರ್ಕಾರ ಎಲ್ಲ ಕ್ರಮಗಳನ್ನು ಕೈಗೊಳ್ಳುತ್ತಿದೆ.

ಈಹಿಂದುಳಿದ ರಾಜ್ಯದ ಸರ್ವತೋಮುಖ ಅಭಿವೃದ್ಧಿಯನ್ನು ಸಾಧಿಸಲು ವಾಮರಂಗ ಸರ್ಕಾರ ಶ್ರಮಿಸುತ್ತಿದೆ,

ಕೇರಳ :

ಕೇರಳ ಮೊದಲಿನಿಂದಲೂ ಕಮ್ಯುನಿಷ್ಠ ಬಲಿಷ್ಠ ಕ್ಷೇತ್ರ. ಈ ಬಾರಿಯ ವಾಮರಂಗ ಸರ್ಕಾರ ಪೂರ್ತ ತನ್ನ ಜೊತೆಯ ಇತರ ವಾಮರಂಗ ಸರ್ಕಾರಗಳ ಹಾಗೆ ಜನಪರ ಧೋರಣೆಗಳನ್ನೇ ಅನುಸರಿಸುತ್ತಿದೆ. ಭಾರತದಾದ್ಯಂತ ಯಾವರಾಜ್ಯದಲ್ಲೂ ಕೃಷಿಕಾರ್ಮಿಕರಿಗೆ ಇಷ್ಟು ವೇತನ ಸೌಲಭ್ಯಗಳಿಲ್ಲ. ಭಾರತದಲ್ಲೇ ಮೊದಲಬಾರಿಗೆ ವಿಶ್ವವಿದ್ಯಾಲಯದ ಅಂಗಗಳಲ್ಲಿ ವಿದ್ಯಾರ್ಥಿಗಳಿಗೆ ಸ್ಥಾನವನ್ನು 1967ರ ವಾಮರಂಗ ಸರ್ಕಾರ ಕೊಟ್ಟಿತ್ತು.

ಕೇರಳದಲ್ಲಿ ಇನ್ನೂ ಹಿಂದುಳಿದಿರುವ ಕೈಗಾರಿಕೆ, ಉದ್ಯೋಗ ಮುಂತಾದುವುಗಳನ್ನು ಸುಧಾರಿಸಲು ಸದ್ಯದ ಸರ್ಕಾರ ಪ್ರಗತಿಪರ ಯೋಜನೆಗಳನ್ನು ರೂಪಿಸುತ್ತಿದೆ. ಜಮೀನು ವಿತರಣೆ ಭರದಿಂದ ನಡೆಯುತ್ತಿದೆ. ಜೂನ್ ವೇಳೆಗೆ ಎರಡು ಲಕ್ಷ ಜನರು ಜಮೀನಿನ ಜೊತೆಗೆ ಅದರ ಅಧಿಕೃತ ದಾಖಲೆಗಳನ್ನು ವಶಕ್ಕೆ ಪಡೆದಿರುತ್ತಾರೆ. ಗುಡಿಸಲುವಾಸಿಗಳಿಗೆ ಮನೆ ಕಟ್ಟಿಕೊಡುವ ಯೋಜನೆ ಪ್ರಗತಿಯಲ್ಲಿದೆ. ಭೂಸ್ವಾಧಾರಣಾ ಕಾಯಿದೆಯಿಂದ ದುಷ್ಪರಿಣಾಮ ಅನುಭವಿಸಿದ ಭೂಮಾಲೀಕರ ಪರಿಹಾರಕ್ಕಾಗಿ ಹೊಸಯೋಜನೆಯೊಂದು ಜಾರಿಯಲ್ಲಿದೆ.

ಕೇರಳದ ಸಾಂಪ್ರದಾಯಿಕ ಬೆಸ್ತರು ತೀರ ಸಾಲದಲ್ಲಿದ್ದಾರೆ. ಈಗ ಅವರ ಸಹಕಾರಿಗಳ ಬದಲು ಮೀನುಗಾರರ "ಗ್ರಾಮ"ಗಳನ್ನು ರಚಿಸಲಾಗಿದೆ. ಮೀನುಗಾರರ ರಕ್ಷಣೆಗಾಗಿ ಗುಂಪು ವಿಮಾಯೋಜನೆ ಸಹ ಜಾರಿಯಲ್ಲಿದೆ, ಅವರಿಗಾಗಿ 15,000 ಮನೆಗಳು ನಿರ್ಮಾಣಗೊಳ್ಳುತ್ತಿವೆ. ಲೇವಾದೇವಿಗಾರರ ಹಿಡಿತದಿಂದ ಅವರನ್ನು ರಕ್ಷಿಸಲು ಅವರಿಗೆ ಜಮೀನು, ಯಾಂತ್ರೀಕೃತವಲ್ಲದ ದೋಣಿ ಮತ್ತು ಬಲೆಗಳನ್ನು ಕೊಡಲಾಗಿದೆ.

ಫಾರಂ ರೈತರಿಂದ ಕಂದಾಯ ಬಾಕಿ ವಸೂಲಾತಿಯನ್ನು ನಿಲ್ಲಿಸಲಾಗಿದೆ. ಹಾಗೆಯೇ ಗೇಣಿಪಡೆದ ಜಮೀನಿನ ಬೆಲೆಯ ಕಂತನ್ನು ಕೊಡುವುದನ್ನೂ ನಿಲ್ಲಿಸಲಾಗಿದೆ. ಸಾಲ ನೀಡುವವರ ಹಿಡಿತದಿಂದ ಅವರನ್ನು ಈ ಮೂಲಕ ರಕ್ಷಿಸಲಾಗುತ್ತಿದೆ. ಮಧ್ಯಮ ಮತ್ತು ಸಣ್ಣ ನೀರಾವರಿಗೆ ಕೇರಳದಲ್ಲಿ ಹೆಚ್ಚು ಪ್ರಾಶಸ್ತ್ಯ ಕೊಡಲಾಗುತ್ತಿದೆ. ನಿಸರ್ಗದ ಹೊಡೆತಗಳಿಂದ ರೈತರನ್ನು ರಕ್ಷಿಸಲು ಆಯ್ದ ಪ್ರದೇಶಗಳಲ್ಲಿ ಬೆಳೆಗಳ ಮೇಲೆ ವಿಮೆ ಇಳಿಸುವ ಯೋಜನೆಯನ್ನು ಜಾರಿಗೆ ತರಲಾಗಿದೆ. ಆದಿವಾಸಿ ಮತ್ತು ಹರಿಜನರ, ಸಣ್ಣರೈತರ ದನಕರುಗಳ ಮೇಲೂ ವಿಮೆ ಇಳಿಸಲು ಆದೇಶಿಸಲಾಗಿದೆ. ಇದರ ಎಲ್ಲ ಖರ್ಚುಗಳನ್ನು ಸರ್ಕಾರವೇ ವಹಿಸಿಕೊಳ್ಳುತ್ತಿದೆ. ಸಣ್ಣರೈತರ ಸಾಲದ ಬಡ್ಡಿಯನ್ನು ಮಜಾಮಾಡಲಾಗಿದ್ದು ಹರಿಜನರ ಎಲ್ಲ ಸಾಲ ವಗೈರೆಗಳ ಪಾವತಿಯನ್ನು ಸರ್ಕಾರ ವಹಿಸಿಕೊಂಡಿದೆ.

ಪಂಚಾಯಿತಿಗಳು ಹರಿಜನ ಗಿರಿಜನರ ಇತರ ದುರ್ಬಲ ವರ್ಗಗಳ ವಸತಿಯ ನೀರು, ವಿದ್ಯುಚ್ಛಕ್ತಿ, ಒಳಚರಂಡಿ, ವ್ಯವಸ್ಥೆಯನ್ನು ನಿರ್ಮಿಸುತ್ತಿದೆ, ಸರ್ಕಾರ ಅನೇಕ ಸಮಾಜ ಸೇವಾ ಕ್ರಮಗಳನ್ನು ಕೈಗೊಂಡಿದೆ. ರಾಜ್ಯದ ಇಡೀ ಶಾಲಾ ವಿದ್ಯಾರ್ಥಿ ಸಮೂಹದ ವೈದ್ಯಕೀಯ ಪರೀಕ್ಷೆ ನಡೆದಿದೆ. ಇಡೀ ರಾಜ್ಯದ ಜನತೆ ಈ ಸೌಲಭ್ಯದ ಅನುಕೂಲ ಪಡೆಯಲಿದ್ದಾರೆ. ಈ ಕ್ರಮ ಭಾರತದಲ್ಲೇ ಪ್ರಥಮ.

ಸಂಘಟಿತ ಕಾರ್ಮಿಕರನ್ನು ಸರ್ಕಾರ ಅಲಕ್ಷಿಸಿಲ್ಲ. ಅವರು ಈಗ ಹೆಚ್ಚು ವೇತನ ಪಡೆಯುತ್ತಿದ್ದಾರೆ. ಅವರ ಹೋರಾಟದ ಹಕ್ಕು ಕಡಿತಗೊಂಡಿಲ್ಲ. ಸರ್ಕಾರ ಉತ್ಸಾಹ ತಳೆದು ಅವರ ವಿವಾದಗಳನ್ನು ಪರಿಹರಿಸುತ್ತಿದೆ.

ಪಂಚಾಯಿತಿಗಳ ಸ್ವಂತ ಕಾರ್ಯಕ್ರಮಗಳಿಗೆ ಸರ್ಕಾರ 2.5 ಕೋಟಿ ರೂ. ಮೀಸಲಿಟ್ಟಿದೆ. ಅಧಿಕಾರದ ವಿಕೇಂದ್ರೀಕರಣವನ್ನು ಪಂಚಾಯಿತಿಗಳ ಮೂಲಕ ಸಾಧಿಸಲಾಗುತ್ತಿದೆ.

○

ರಾಜ್ಯದಾದ್ಯಂತ ಹೋರಾಟಕ್ಕೆ ಬೀಡಿ ಫೆಡರೇಷನ್ ಸಭೆಯ ಕರೆ

ರಾಜ್ಯದ ಬೀಡಿಕಾರ್ಮಿಕರ ಫೆಡರೇಷನ್ ಕಾರ್ಯಕಾರಿ ಸಮಿತಿ ಸಭೆಯು ಫೆಡರೇಷನ್‌ನ ಅಧ್ಯಕ್ಷರಾದ ಕಾಂ, ಎಸ್. ಸೂರ್ಯನಾರಾಯಣರಾವ್‌ರವರ ಅಧ್ಯಕ್ಷತೆಯಲ್ಲಿ ಬೆಂಗಳೂರಿನಲ್ಲಿ ಸೇರಿ ಫೆಡರೇಷನ್‌ನ ಕಾರ್ಯದರ್ಶಿ ಕಾಂ. ದಸ್ತಗೀರ್‌ರವರು ಕಾರ್ಯಚಟುವಟಿಕೆಗಳ ಬಗ್ಗೆ ಇತ್ತವರದಿ ಚರ್ಚೆಯಾದ ನಂತರ ಈ ಕೆಳಗೆ ಕಂಡ ತೀರ್ಮಾನಗಳನ್ನು ಕೈಗೊಳ್ಳಲಾಯಿತು,

1. ಕೇಂದ್ರಸರ್ಕಾರವು ಹೊಗೆಸೊಪ್ಪಿನ ಮೇಲೆ ಜಾರಿಯಲ್ಲಿದ್ದ ತೆರಿಗೆಯನ್ನು ತೆಗೆದು, ತಯಾರಾದ ಬೀಡಿಯ ಮೇಲೆ ಹೊರಿಸಿರುವುದರಿಂದ ಈ ಬೀಡಿ ಉದ್ದಿಮೆಯಲ್ಲಿ ದುಡಿಯುವ ಲಕ್ಷಾಂತರ ಮಜೂರರಿಗೆ ಅವರ ಹೋರಾಟದ ಫಲವಾಗಿ ಪಡೆದಿದ್ದ ಸೌಲಭ್ಯಗಳು ಇಲ್ಲವಾಗಿವೆ. ಆದ್ದರಿಂದ ಕೇಂದ್ರಸರ್ಕಾರದ ಮೇಲೆ ಒತ್ತಾಯ ತಂದು ಹೊಗೆಸೊಪ್ಪಿನ ಮೇಲೆ ತೆರಿಗೆಯನ್ನು ಹಾಕುವಂತೆ ಮಾಡಲು ತಾ. 2-6-80ರಿಂದ 12-6-80ರವರವಿಗೆ ಸುಮಾರು ಒಂದುಲಕ್ಷದಷ್ಟು ಸಹಿ ಸಂಗ್ರಹದ ಚಳುವಳಿಯನ್ನು ನಡೆಸಿ ತಾ, 12-6-80ರೊಳಗೆ ಕೇಂದ್ರಸರ್ಕಾರಕ್ಕೆ ಹಣಕಾಸಿನ ಇಲಾಖೆಗೆ ಸಹಿ ಸಂಗ್ರಹದ ಕಾಗದಗಳನ್ನು ಮುಟ್ಟಿಸಬೇಕೆಂದು ತೀರ್ಮಾನಿಸಲಾಯಿತು.

2. ಬೀಡಿಮಾಲೀಕರಲ್ಲಿ 1000 ಬೀಡಿಗೆ 9ರೂ. ಮಜೂರಿಬೇಕೆಂದು, ಶೇಕಡ 20 ಬೋನಸ್ಸು ಬೇಕೆಂದು ತಾ. 5-6-80ರೊಳಗೆ ಬೇಡಿಕೆಯ ನೋಟೀಸುಗಳನ್ನು ಮಂಡಿಸಬೇಕೆಂದು ತೀರ್ಮಾನಿಸಲಾಯಿತು.

3. ರಾಜ್ಯಸರ್ಕಾರವು ತಳೆದಿರುವ ಕಾರ್ಮಿಕ ವಿರೋಧಿ ಧೋರಣೆಯನ್ನು, ಮತ್ತು ಸರಕಾರ ಜಾರಿಗೆ ತರಲು ಬಯಸಿರುವ ಕಾರ್ಮಿಕ ವಿರೋಧಿ ಕರಾಳ ಶಾಸನವನ್ನು ಪ್ರತಿಭಟಿಸಲು 9-6-80ರಂದು ಚಳುವಳಿ ನಡೆಸಬೇಕೆಂದು ತೀರ್ಮಾನ ಕೈಗೊಳ್ಳಲಾಯಿತು. ○

ಮಂಗಳೂರಿನಲ್ಲಿ ಅಂಗವಿಕಲರ ಪ್ರಥಮ ಸಮ್ಮೇಳನ

ಕರ್ನಾಟಕ ರಾಜ್ಯಮಟ್ಟದ ಅಂಗವಿಕಲರ ಪ್ರಪ್ರಥಮ ಸಮ್ಮೇಳನ ಮಂಗಳೂರಿನಲ್ಲಿ ಏಪ್ರಿಲ್ 4ರಂದು ಜರುಗಿತು. ಸಮ್ಮೇಳನದ ಅಧ್ಯಕ್ಷತೆಯನ್ನು ಸಾಹಿತಿ ಗೌರೀಶ ಕಾಯ್ಕಿಣಿ ವಹಿಸಿದ್ದರು.

'ಯುಗಪುರುಷ' ಪತ್ರಿಕೆ ಸಂಪಾದಕರಾದ ಕೊಡತ್ತೂರು ಅನಂತಪದ್ಮನಾಭ ಉಡುಪರು ಸಮ್ಮೇಳನವನ್ನು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾದಿ ಉಪಸಂಪಾದಕರಾದ ಎಂ. ವಿ. ಹೆಗ್ಡೆ ಅವರು ಶ್ರದ್ಧೆ ಆಸಕ್ತಿಗಳನ್ನು ಅಂಗವಿಕಲರು ಬೆಳೆಸಿಕೊಳ್ಳಲು ಕರೆ ನೀಡಿದರು. ಏಪ್ರಿಲ್ 4 ಮತ್ತು 5ರಂದು ಅಂಗವಿಕಲರಿಗೆ ಸಂಬಂಧಿಸಿದ ವಿಚಾರಗೋಷ್ಠಿಗಳು ನಡೆದವು. ಎಲ್ಲಾ ರಾಜಕೀಯ ಪಕ್ಷಗಳು ಅಂಗವಿಕಲರ ಬಗ್ಗೆ ಗಮನಹರಿಸಲು ಸಮ್ಮೇಳನ ಕರೆಇತ್ತಿತು.

●

ಬಡವರಿಗೆ ಉಚಿತ ವಿದ್ಯುಚ್ಛಕ್ತಿ ಕೇರಳ ಸರಕಾರದ ಹೊಸ ಕೊಡುಗೆ

ಎಡ ಮತ್ತು ಪ್ರಜಾಸತ್ತಾತ್ಮಕ ರಂಗ ಕೇರಳ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಕೇವಲ ಮೂರು ತಿಂಗಳ ಅವಧಿಯಲ್ಲಿ ಬಡಜನತೆಗೆ ಉತ್ತಮ ಜೀವನ ಮಟ್ಟವನ್ನು ಕಲ್ಪಿಸಲು ಹಲವಾರು ಕಾರ್ಯಕ್ರಮಗಳನ್ನು ರೂಪಿಸಿದೆ.

ಈಗ ಕೇರಳದ ಜನತೆ 15 ಯೂನಿಟ್ ಅಥವಾ ಅದಕ್ಕಿಂತ ಕಡಿಮೆ ವಿದ್ಯುಚ್ಛಕ್ತಿ ಬಳಸುವವರಾದರೆ ಉಚಿತವಾಗಿ ವಿದ್ಯುಚ್ಛಕ್ತಿಯನ್ನು ಉಪಯೋಗಿಸಬಹುದು. ಈ ಬಗ್ಗೆ ಅರ್ಥಖಾತೆ ಮತ್ತು ವಿದ್ಯುಚ್ಛಕ್ತಿ ಮಂಡಳಿಯ ಮಧ್ಯೆ ನಡೆಯುತ್ತಿರುವ ಮಾತುಕತೆಗಳು ಬೇಗ ಮುಗಿಯುವ ಸೂಚನೆ ಇದೆ. ಯೋಜನೆಯನ್ನು ಆಗಸ್ಟ್ 15ರಿಂದ ಜಾರಿಗೆ ತರಲು ಸರ್ಕಾರ ನಿರ್ಧರಿಸಿದೆ.

ಉಚಿತ ವಿದ್ಯುತ್ ನೀಡಿಕೆಯಿಂದ ಮಂಡಳಿಗೆ ಆಗುವ ನಷ್ಟವನ್ನು ತುಂಬಿಸಲು ಸರಕಾರ ಹವಾನಿಯಂತ್ರಣ ಯಂತ್ರಗಳು, ರೆಫ್ರಿಜರೇಟರ್ ಮುಂತಾದ ವಿಲಾಸೀ ವಸ್ತುಗಳಿಗೆ ಸರಬರಾಜು ಮಾಡುವ ವಿದ್ಯುತ್ ದರವನ್ನು ಏರಿಸುವ ಸಲಹೆಯನ್ನು ಪರಿಶೀಲಿಸುತ್ತಿದೆ.

ಮುಂದಿನ ಮೂರು ವರ್ಷದಲ್ಲಿ ರಾಜ್ಯದ ಎಲ್ಲಾ ದಲಿತರ ಕಾಲೋನಿಗಳು ವಿದ್ಯುತ್ತನ್ನು ಪಡೆಯಲಿವೆ. ಪ್ರಸಕ್ತ ವರ್ಷದಲ್ಲಿ ಇಪ್ಪತ್ತು ಲಕ್ಷಜನ ವಿದ್ಯುಚ್ಛಕ್ತಿಯ ಉಪಯೋಗ ಪಡೆಯಲಿದ್ದಾರೆ.

ಇದೆಂಥ ದಾರುಣ ಪರಿಸ್ಥಿತಿ ?

ವಿವಿಧ ಕೈಗಾರಿಕೆಗಳಲ್ಲಿ ಕೆಲಸ ಮಾಡುವ ಎಷ್ಟೋ ಕಾರ್ಮಿಕರಿಗೆ ವಿವಿಧ ಅಪಘಾತಗಳು ಸಂಭವಿಸುವ ಸಂಭವವಿದೆ. ಕಾರ್ಮಿಕ ಸಚಿವ ಶಾಖೆಯ ಸಮೀಕ್ಷೆ ಪ್ರಕಾರ ಪ್ರತಿ ವರುಷ ಸುಮಾರು ಎರಡುವರೆ ಲಕ್ಷ ಜನ ಕಾರ್ಮಿಕರು ವಿವಿಧ ಅಪಘಾತಗಳಿಗೆ ಗುರಿಯಾಗುತ್ತಾರೆ. ಕನಿಷ್ಟ 600 ಮಂದಿಯ ಪ್ರಾಣನಷ್ಟ ಕೂಡ ಸಂಭವಿಸುತ್ತಿದೆ. ಕಾರ್ಮಿಕರ ಭದ್ರತೆ ನಿಮಿತ್ತ ಅನೇಕ ಕಾನೂನುಗಳಿವೆ. ಆದರೆ ಉದ್ಯಮಿಗಳು ಇವುಗಳನ್ನು ಸರಿಯಾಗಿ ಜಾರಿಯಲ್ಲಿ ತರದೇ ಇರುವುದರಿಂದ ಇಷ್ಟು ದೊಡ್ಡ ಪ್ರಮಾಣದಲ್ಲಿ ಅಪಘಾತಗಳು ನಡೆಯುತ್ತಿವೆ, ಕಾರ್ಮಿಕರಸಂಖ್ಯೆಯಲ್ಲಿ ಪ್ರತಿಶತ 60ಕ್ಕೂ ಹೆಚ್ಚು ಸಣ್ಣ ಕೈಗಾರಿಕೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಆದರೆ ಈ ಕಾರ್ಖಾನೆಗಳಲ್ಲಿ ಭದ್ರತೆ ಏರ್ಪಾಟುಗಳು ಸ್ವಲ್ಪವೂ ಇರುವುದಿಲ್ಲವೆಂದೇ ಹೇಳಬಹುದು. ಬಹಳಷ್ಟರಲ್ಲಿ ಅತಿ ಪ್ರಧಾನವಾದ ಪ್ರಥಮ ಚಿಕಿತ್ಸೆ ಸದುಪಾಯ ಕೂಡಾ ಇರುವುದಿಲ್ಲವೆಂದರೆ ಬೇರೇನು ಹೇಳಬೇಕು?

ಇರುವ ಕಡೆಗೂ ಕೂಡ ಅವಶ್ಯಕ ಔಷದ ಇನ್ನಿತರ ಸಲಕರಣೆಗಳ ಲೋಪವಿರುತ್ತದೆ. ಅನೇಕ ಕೈಗಾರಿಕೆಗಳಲ್ಲಿ ವೆಲ್ಡಿಂಗ್ ಮಾಡುವಾಗ ಹಾಕಿಕೊಳ್ಳುವ ಬಣ್ಣದ ಕನ್ನಡಕಗಳನ್ನೂ, ಲೆದರ್ ಮೂಗಳನ್ನೂ, ಗ್ಲೋವ್ಸ್‌ಗಳನ್ನೂ ಅತ್ಯಾವಶ್ಯಕವಾಗಿ ಉಪಯೋಗಿಸಬೇಕಿರುವಾಗ ಎಷ್ಟೋ ಕಾರ್ಖಾನೆಗಳಲ್ಲಿ ಇವುಗಳನ್ನು ಉಪಯೋಗಿಸುವದಿಲ್ಲ, ಇವುಗಳ ಜಾರಿಯ ಬಗ್ಗೆ ತನಿಖೆ ವಿಭಾಗ ತಮ್ಮ ಕರ್ತವ್ಯಗಳನ್ನು ಸರಿಯಾಗಿ ನಿರ್ವಹಿಸದೆ ಇರುವದರಿಂದ ಈ ಅಪಾಯಕರ ಪರಿಸ್ಥಿತಿ ಏರ್ಪಟ್ಟಿದೆ.

ಅಂಧತ್ವ ನಿರೋಧಕ್ಕಾಗಿ ಕೆಲಸ ಮಾಡುತ್ತಿರುವ ಸಂಸ್ಥೆ ನಡೆಸಿದ ಸಮೀಕ್ಷೆ ಪ್ರಕಾರ ಕಾರ್ಮಿಕರಲ್ಲಿ ಶೇಕಡ 72 ಮಂದಿ ಕಣ್ಣುಬೇನೆಯಿಂದ ನರಳುತ್ತಿದ್ದಾರೆ. ಸರಿಯಾದ ಉಪಕರಣಗಳನ್ನು ಅವಲಂಬಿಸದೆ ಇರುವದರಿಂದ ವೆಲ್ಡಿಂಗ್ ಮಾಡುವವರು,ಕುಲುಮೆಗಳ ಹತ್ತಿರ ಕೆಲಸ ಮಾಡುವವರು, ಮೆಟಾಲಿಕ್ ಪಾಲಿಷಿಂಗ್ ಮಾಡುವವರು ಅಧಿಕವಾಗಿ ವಿವಿಧ ರೀತಿಯ ಕಣ್ಣುಬೇನೆಗಳಿಗೆ ಗುರಿಯಾಗುತ್ತಿದ್ದಾರೆ.

ಜವಳಿ ಕೈಗಾರಿಕೆಯಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಕೆಲಸದಲ್ಲಿ ಸೇರಿದ ಕೆಲವೇ ವರ್ಷಗಳಲ್ಲಿ ಹೃದಯ ಸಂಬಂಧವಾದ ವ್ಯಾದಿಗಳು ಬರುತ್ತಿವೆ. ಅದೇ ರೀತಿ ಅರಳೆ ಗುಂಜುವಿಂದ ಕೂಡಿದ ಗಾಳಿಯನ್ನು ಉಸಿರಾಡುವುದರಿಂದ ಪುಪ್ಪುಸಗಳು ಕೆಟ್ಟುಹೋಗುತ್ತವೆ. ಬೀಡಿ ಪರಿಶ್ರಮಗಳಲ್ಲಿಯ ಕಾರ್ಮಿಕರ ಸ್ಥಿತಿ ಕೂಡ ದಾರುಣವಾಗಿಯೇ ಇದೆ. ತಂಬಾಕನ್ನು ಬ್ಲೆಂಡಿಂಗ್, ಪ್ರೊಸೆಸಿಂಗ್, ಪಲ್ವರೈಸಿಂಗ್, ಬೇಕಿಂಗ್‌ಗಳಂತಹ ಪ್ರಕ್ರಿಯೆಗಳಿಗೆ ಗುರಿಮಾಡಿದಾಗ ಹೊರಡುವ ವಾಯುವನ್ನು ಸೇವಿಸುವುದರಿಂದ ಆ ಕಾರ್ಮಿಕರ ಪುಪ್ಪುಸಗಳಲ್ಲಿ ವಿಷ ಪದಾರ್ಥಗಳು ಸೇರುತ್ತವೆ. ಫಲಿತಾಂಶವಾಗಿ ಈ ಕಾರ್ಖಾನೆಗಳಲ್ಲಿ ಸೇರಿದ ಕೆಲವು ವರ್ಷಗಳಲ್ಲಿಯೇ 3ರಲ್ಲಿ 2 ಭಾಗ ಕಾರ್ಮಿಕರಿಗೆ ಕ್ಷಯ ರೋಗ ಬರುತ್ತದೆ. ಅನೇಕ ಮಂದಿ ತಮ್ಮ ಉದ್ಯೋಗಗಳನ್ನು ಕಳೆದುಕೊಳ್ಳುತ್ತಾರೆ. ಇನ್ನೂ ದಾರುಣವಾದ ವಿಷಯವೇನೆಂದರೆ ಬೀಡಿ ಪರಿಶ್ರಮದಲ್ಲಿ ಕೆಲಸ ಮಾಡುವವರಲ್ಲಿ ಹೆಚ್ಚು ಜನ 10_20 ವರ್ಷಗಳ ಮಧ್ಯದ ವಯಸ್ಸಿನವರು. ಮೇಲಾಗಿ ಇವರು ದಿನಕ್ಕೆ 14 ಗಂಟೆಗೂ ಹೆಚ್ಚು ಕೆಲಸ ಮಾಡಬೇಕು. ಇವರು ಕೆಲಸಮಾಡುವ ಪ್ರದೇಶ ಕೂಡ ಹೊಗೆಯಿಂದಲೂ, ಹೊಗೆಸೊಪ್ಪಿನಿಂದ ಹೊರಡುವ ವಿಷ ಗಾಳಿಯಿಂದಲೂ ತುಂಬಿ ಅನಾರೋಗ್ಯವನ್ನು ಕಲ್ಪಿಸುವ ಸಣ್ಣ-ಸಣ್ಣ ಕೋಣೆಗಳಲ್ಲಿ ಇರುತ್ತದೆ. ಇದರಿಂದಾಗಿ ಆ ಹಸುಳೆಗಳಿಗೆ ಕೂಡ ಕ್ಷಯದಂತಹ ಭಯಂಕರ ವ್ಯಾಧಿ ತಗಲುತ್ತದೆ, ಬೀಡಿ ಉದ್ಯಮಗಳು ವಿಪರೀತವಾದ ಲಾಭಗಳನ್ನು ಸಂಪಾದಿಸುತ್ತಿದ್ದಾಗ್ಯೂ ಕಾರ್ಮಿಕರು ಕೆಲಸ ಮಾಡುವ ಕೋಣೆಗಳಿಗೆ ವೆಂಟಿಲೇಟರ್‌ಗಳು, ಹೊಗೆ ಚಿಮಣಿಗಳಂತಹ ಕನಿಷ್ಠ ಅನುಕೂಲಗಳನ್ನು ಕೂಡಾಕಲ್ಪಿಸುವುದಿಲ್ಲ. ಸ್ಲೇಟು, ಬಳಪ ತಯಾರಿಸುವ ಕಾರ್ಖಾನೆಗಳಲ್ಲಿ ಕೆಲಸಮಾಡುವವರ ಸ್ಥಿತಿಗತಿ ಇನ್ನೂ ದಾರುಣ. ಬಳಪಗಳ ಸಲುವಾಗಿ ಕಲ್ಲು ಕೆತ್ತುವಾಗ ಇವರು ಸಿಲಿಕಾ ದೂಳನ್ನು ಸೇವಿಸುತ್ತಾರೆ. ಇದರಿಂದ "ಸಿಲಿಕೋಸಿಸ್ ಎಂಬ ರೋಗ ಬರುತ್ತದೆ. ಇದರಿಂದಾಗಿ ಕೆಲವರು ತ್ವರಿತ ಮರಣ ಹೊಂದಿದರೆ ಮತ್ತೆ ಕೆಲವರು ನೋವಿನಿಂದ ಕೆಲವೇ ವರ್ಷಗಳಲ್ಲಿ ಸಾಯುತ್ತಾರೆ. ದಾರುಣವಾದ ಈ ರೋಗಕ್ಕೆ ಸರಿಯಾದ ಚಿಕಿತ್ಸೆ ಇಲ್ಲಿಯವರೆಗೂ ಇಲ್ಲ. ನಿತ್ಯವೂ ಕಲಪವನ್ನು ಗರಗಸದಿಂದ ಕೊರೆಯುವವರಿಗೆ ಕೂಡಾ ಎರಡು ಮೂರು ವರ್ಷಗಳಲ್ಲಿ ಈ ರೋಗ ಬರುತ್ತದೆ. ಈ ವ್ಯಾಧಿಯಿಂದಾಗಿ ಪುಪ್ಪುಸಗಳು ಕೆಟ್ಟು ರೋಗಿಗಳು ರಕ್ತಕಾರುತ್ತ ಭಯಂಕರವಾದ ನೋವನ್ನು ಅನುಭವಿಸುತ್ತ ಸತ್ತುಹೋಗುತ್ತಾರೆ.

ವ್ಯವಸಾಯ ಕಾರ್ಮಿಕರು ಕೂಡ ತರ-ತರಹದ ಅಪಘಾತಗಳಿಗೆ ಗುರಿಯಾಗುತ್ತಿದ್ದಾರೆ. ಸರಿಯಾದ ನಮೂನೆಗಳಿಲ್ಲದ ಕ್ರಷರ್ ಮೇಲೆ ಕೆಲಸ ಮಾಡುವಾಗ ಅನೇಕ ಮಂದಿ ಕಾರ್ಮಿಕರ ಕೈ, ಬೆರಳು ಕಡಿದು ಹೋಗುತ್ತವೆ. ಅದೇ ರೀತಿ ಕಬ್ಬು ಗಾಣಗಳು, ಗೋದಿ, ಹುಲ್ಲು, ದನಗಳ ಹುಲ್ಲುಗಳಂತಹವುಗಳನ್ನು ಕೊಯ್ಯುವಾಗ ಯಂತ್ರಗಳಿಂದಾಗಿ ಕೂಡ ಅನೇಕ ಮಂದಿಗೆ ಅಪಾಯ ಸಂಭವಿಸುತ್ತದೆ. ಈ ವಿಧವಾಗಿ ಅಂಗ ವೈಕಲ್ಯ ಹೊಂದುತ್ತಿರುವವರ ಸಂಖ್ಯೆ ವರ್ಷಕ್ಕೆ ಸಾವಿರಕ್ಕಿಂತಲೂ ಮೇಲ್ಪಟ್ಟು ಇರುತ್ತದೆ. ಈ ಅಪಘಾತಗಳಿಗೆ ಮುಖ್ಯ ಕಾರಣ ಈ ಯಂತ್ರಗಳನ್ನು ತಯಾರು ಮಾಡುವವರು ಇಂಡಿಯನ್ ಸ್ಟ್ಯಾಂಡರ್ಡ ಇನ್‌ಸ್ಟಿಟ್ಯೂಟ್‌ರವರ ಪ್ರಮಾಣಗಳನ್ನು ಪಾಲಿಸದೆ ಇರುವದು. ಈ ಯಂತ್ರಗಳ ನಮೂನೆಗಳಲ್ಲಿ ಸ್ವಲ್ಪ ಮಾರ್ಪಾಡು ಮಾಡಿದರೆ ಎಷ್ಟೋ ಸಾವಿರ ಮಂದಿಯನ್ನು ಶಾಶ್ವತ ಅಂಗ ವೈಕಲ್ಯದಿಂದ ರಕ್ಷಿಸಬಹುದು.

ಮತ್ತೆ ನಮ್ಮ ಕಾರ್ಮಿಕರು ಇಂತಹ ಭದ್ರತೆಗಳಿಲ್ಲದ ಪರಿಸ್ಥಿತಿಗಳಲ್ಲಿ ಕೆಲಸ ಮಾಡುತ್ತಿದ್ದರೆ ಅವರ ಗತಿ ಏನು? ಇವರಿಗೆ ತೀವ್ರವಾದ ರೋಗ ತಗಲಿದರೂ, ಅಂಗ ವೈಕಲ್ಯ ಹೊಂದಿದರೆ ಉದ್ಯೋಗಗಳು ಹೋಗುತ್ತವೆ.

ಈ ವಿಧವಾಗಿ ಅಂಗ ವೈಕಲ್ಯ ಹೊಂದಿದ ಎಷ್ಟೋ ಚಿಕ್ಕವರು, ದೊಡ್ಡವರು ರಸ್ತೆಯ ಮೇಲೆ ಭಿಕ್ಷೆ ಬೇಡುತ್ತ ಕಾಣಿಸುತ್ತಿರುತ್ತಾರೆ. ಇದು ಹೃದಯ ಹಿಂಡುವ ದೃಶ್ಯ. ಈ ದುಸ್ಥಿತಿಯನ್ನು ತಡೆಯಬೇಕೆಂದರೆ ಕೈಗಾರಿಕೆ ಭದ್ರತಾ ಕಾನೂನು ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವಂತಾಗಬೇಕು. ಹಾಗೆಯೇ ಅಪಘಾತಗಳಿಗೆ ಗುರಿಯಾಗುವ ಅವಕಾಶವಿರುವ ಎಲ್ಲ ತರಹದ ಕಾರ್ಮಿಕರಿಗೆ ನಿರ್ಬಂಧ ಜೀವವಿಮೆ ಸೌಕರ್ಯ ಕಲ್ಪಿಸಬೇಕು. ಇದರಿಂದ ಉಪಾದಿಯನ್ನು ಕಳೆದುಕೊಂಡ ದುರದೃಷ್ಟವಂತರು ಬೀದಿಯಲ್ಲಿ ಬೀಳುವ ಅವಶ್ಯಕತೆ ಒದಗದು. ಅವರು, ಅವರ ಮೇಲೆ ಅವಲಂಬಿಸಿರುವವರು ಇಷ್ಟಾದರೂ ತಿನ್ನಬಲ್ಲರು. ಈ ಕ್ರಮಗಳ ಜಾರಿಗಾಗಿ ಕಾರ್ಮಿಕರು ಸಂಘಟಿತ ಹೋರಾಟವನ್ನು ನಡೆಸಬೇಕು.

ಹೆಚ್.ಗೋವಿಂದ್‌ರೆಡ್ಡಿ ಗಿರಿದಾಸ್

●

ಅಕ್ಕಿ ಆಲೂರಿನಲ್ಲಿ ನಾಗರೀಕರ ಪ್ರತಿಭಟನೆ

ಉ. ಕ. ಜಿಲ್ಲೆ ಹಾನಗಲ್ಲ ತಾಲ್ಲೂಕು ಅಕ್ಕಿಆಲೂರಿನಲ್ಲಿ ಟೌನ್ ಪಂಚಾಯ್ತಿಯವರು ಮನೆಕರ, ನೀರುಕರ, ಸೆಸ್ ಹೆಚ್ಚಿಸಲು ನಿರ್ಧರಿಸುವುದನ್ನು ಪ್ರತಿಭಟಿಸಲು ಅಲ್ಲಿನ ನಾಗರಿಕರು 15-5-80ರಂದು ಸಭೆ ಸೇರಿದ್ದರು, ಅದರಲ್ಲಿ ಎಂ. ಎಸ್. ಧಾರೇಶ್ವರ, ಸಿ. ಜಿ. ಪಾಟೀಲ ಮುಂತಾದವರು ಭಾಗವಹಿಸಿದ್ದರು. ಊರಿನ 21 ಜನ ಪ್ರಮುಖರ ಸಮಿತಿಯನ್ನು ಸಭೆಯಲ್ಲಿ ರಚಿಸಲಾಯಿತು. ಸಭೆಯನ್ನು ಉದ್ದೇಶಿಸಿ ತಾಲ್ಲೂಕು ರೈತ ಸಂಘದ ಅಧ್ಯಕ್ಷ ಫಕೀರಪ್ಪ, ಧಾರೇಶ್ವರ ಅವರು ಮಾತನಾಡಿದರು. ಜಿನ್ನಾಸಾಹೇಬ ಅವರು ಹೋರಾಟವನ್ನು ಯಶಸ್ವಿಗೊಳಿಸಲು ಕರೆ ಕೊಟ್ಟರು.

○

ಯುವಜನ ಫೆಡರೇಷನ್ ಸಭೆ

ಕೇರಳ ಸೋಶಿಯಲಿಸ್ಟ್ ಯುವಜನ ಫೆಡರೇಷನ್‌ನ ಸಭೆಯು ಮೀಂಜ ಪಂಚಾಯತಿನ ಕಡಂಬಾರಿನಲ್ಲಿ ಮೇ 23 ರಂದು ಫೆಡರೇಷನ್‌ನ ಮಂಜೇಶ್ವರ ಬ್ಲೋಕ್ ಸಮಿತಿಯ ಕಾರ್ಯದರ್ಶಿ ಕಾಮ್ರೇಡ್ ಯು ವಸಂತನವರ ಅಧ್ಯಕ್ಷತೆಯಲ್ಲಿ ಜರುಗಿತು.

ನಮ್ಮ ಸಮಾಜದಲ್ಲಿ ನೆಲೆ ನಿಂತಿರುವ ಅಂಧಶ್ರದ್ಧೆ, ಅಂಧವಿಶ್ವಾಸ, ಮೂಢನಂಬಿಕೆ, ಶೋಷಣೆ ಇವೇ ಮೊದಲಾದ ಹಳೆಯ ಮೌಲ್ಯಗಳನ್ನು ಕಿತ್ತೆಸೆದು, ವೈಜ್ಞಾನಿಕ ದೃಷ್ಟಿಕೋನದ ಹೊಸ ಮೌಲ್ಯಗಳನ್ನೊಳಗೊಂಡ ನವ ಸಮಾಜವನ್ನು ಕಟ್ಟಲು ಯುವಜನರು ಮುಂದಾಗಬೇಕೆಂದು ಸಭಾಧ್ಯಕ್ಷರು ಕರೆ ನೀಡಿದರು. ಜನಸಾಮಾನ್ಯರ ಸಮಸ್ಯೆಗಳ ಬಗ್ಗೆ ರೈತರು, ಮಜೂರರು ಹಾಗೂ ಯುವಜನರು ಒಂದಾಗಿ ಹೋರಾಟ ನಡೆಸಬೇಕೆಂದು ಮಂಜೇಶ್ವರ ಪಂಚಾಯತು ಅಧ್ಯಕ್ಷ, ಮಾರ್ಕ್ಸಿಸ್ಟ್ ಮುಂದಾಳು ಕಾಂ. ಬಿ. ಯಂ. ರಾಮಯ್ಯಶೆಟ್ಟರು ತಿಳಿಸಿದರು.

ಸಭೆಯಲ್ಲಿ ಕೆ. ಸುಬ್ಬ ಸಪಲ್ಯ (ಅಧ್ಯಕ್ಷ) ಕೆ. ಮೊಯ್ದಿನಬ್ಬ, ಕೆ. ಅಬೂಬಕ್ಕರ್ (ಉಪಾಧ್ಯಕ್ಷರುಗಳು) ಕೆ. ರಾಮಣ್ಣ ಪೂಜಾರಿ (ಕಾರ್ಯದರ್ಶಿ) ಕೆ. ಮಹಾಬಲ ಶೆಟ್ಟಿ, ಕೆ. ದಯಾಶಂಕರ್ (ಉಪಕಾರ್ಯದರ್ಶಿಗಳು) ಕೆ. ಲಕ್ಷ್ಮೀಶ, ಕೆ. ಸೋಮಪ್ಪ ಪೂಜಾರಿ, ಕೆ. ಗುರುವ, ಕೆ. ಬಾಬು, ಕೆ. ಸಾಹೇಬ್, ಕೆ. ಕೃಷ್ಣಪ್ಪ, ಕೆ. ಮೋಹನ್‌ಕುಮಾರ್, ಕೆ. ಸದಾನಂದ (ಸದಸ್ಯರುಗಳು) ಇವರುಗಳನ್ನೊಳಗೊಂಡ ಕಡಂಬಾರು ಗ್ರಾಮ ಸಮಿತಿಯನ್ನು ರಚಿಸಲಾಯಿತು.

●

ಭಾರತೀಯ ವೈದ್ಯ ಪದ್ಧತಿ ವಿದ್ಯಾರ್ಥಿಗಳ ಹೋರಾಟ

ಹೌಸ್ ಸರ್ಜನ್‌ಗಳಿಗೆ ಸ್ಟೈಫಂಡ್ ಹೆಚ್ಚಳ ಮತ್ತು ಕ್ಯಾಷುಯಲ್ ರಜೆ ಸೌಲಭ್ಯ, ಕಾಲೇಜಿಗೆ ಉತ್ತಮ ಗ್ರಂಥ ಭಂಡಾರ, ಪ್ರಯೋಗಾಲಯ, ಗಿಡಮೂಲಿಕೆಗಳ ತೋಟ, ಹೆಚ್ಚಿನ ಅಧ್ಯಾಪಕರ ನೇಮಕಾತಿ, ಆಸ್ಪತ್ರೆಗೆ ಅಗತ್ಯ ಪ್ರಮಾಣದ ಔಷದಿ, ಚಿಕಿತ್ಸೋಪಕರಣಗಳು, ಇತ್ಯಾದಿಗಳ ಪೂರೈಕೆ, ವಿದ್ಯಾಭ್ಯಾಸದ ತಕ್ಷಣ ಉದ್ಯೋಗಾವಕಾಶ ದೇಶೀಯ ವೈದ್ಯ ಪದ್ಧತಿಗಳಿಗೆ ಸಮಾನ ಸ್ಥಾನ-ಮಾನ, ಉದ್ದೇಶಿತ ಆರೋಗ್ಯ ವಿಶ್ವವಿದ್ಯಾಲಯಕ್ಕೆ ಭಾರತೀಯ ವೈದ್ಯಪದ್ಧತಿ ಮತ್ತು ಹೋಮಿಯೋಪತಿ ಕಾಲೇಜುಗಳ ಸೇರ್ಪಡೆ, ಡಾ॥ ಮೇಲುಕೋಟೆ ಸಮಿತಿಯ ವರದಿಯನ್ನು ಜಾರಿಗೊಳಿಸುವುದು, ಇತ್ಯಾದಿ ಹದಿನಾಲ್ಕು ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಸರ್ಕಾರಕ್ಕೆ ಮತ್ತು ಇಲಾಖೆಗೆ ಬೆಂಗಳೂರಿನ ಸರ್ಕಾರಿ ಕಾಲೇಜಿನ ವಿದ್ಯಾರ್ಥಿಗಳು ಸಲ್ಲಿಸಿದ ಮನವಿಯ ಬಗ್ಗೆ ಸರ್ಕಾರ ಗಮನ ನೀಡದಿದ್ದರಿಂದ ಮುಷ್ಕರ ಪ್ರಾರಂಭಿಸುವುದು ಅನಿವಾರ್ಯವಾಯಿತು.

ಏಪ್ರಿಲ್ 25 ರಿಂದ ಕಪ್ಪುಬ್ಯಾಡ್ಜ್ ಧರಿಸುವುದರ ಮೂಲಕ ಮುಷ್ಕರ ಪ್ರಾರಂಭಿಸಿದ ಹೌಸ್‌ಸರ್ಜನ್‌ಗಳು ಮತ್ತು ವಿದ್ಯಾರ್ಥಿಗಳು ಹಂತ ಹಂತವಾಗಿ ತರಗತಿಗಳ ಬಹಿಷ್ಕಾರ, ಸರದಿ ಉಪವಾಸ ಸತ್ಯಾಗ್ರಹ, ಪ್ರದರ್ಶನ, ಧರಣಿ ಸತ್ಯಾಗ್ರಹಗಳ ಮೂಲಕ ಸರ್ಕಾರದ ಗಮನ ಸೆಳೆಯಲು ಪ್ರಯತ್ನಿಸಿದರು. ಸಮಸ್ಯೆಗಳನ್ನು ಪರಿಹರಿಸುವುದರ ಬದಲು ವಿದ್ಯಾರ್ಥಿಗಳ ನ್ಯಾಯಯುತ ಹೋರಾಟವನ್ನೇ ಮುರಿಯಲು ಹೊರಟ ಇಲಾಖೆಯ ಆಡಳಿತಾಧಿಕಾರಿಗಳದೂರಿನ ಮೇರೆಗೆ ಮೇ 16ರಂದು ಶಾಂತಿಯುತ ಧರಣಿ ಸತ್ಯಾಗ್ರಹ ನಡೆಸುತ್ತಿದ್ದ ವಿದ್ಯಾರ್ಥಿಗಳನ್ನು ನಗರದ ಪೋಲೀಸರು ಪ್ರತಿಬಂಧಕಾಜ್ಞೆ ನೆಪದಲ್ಲಿ ಬಲಾತ್ಕಾರವಾಗಿ ಬಂಧಿಸಿದರು. ಎಸ್.ಎಫ್.ಐ. ರಾಜ್ಯಶಾಖೆ ಪ್ರಧಾನ ಕಾರ್ಯದರ್ಶಿ ಮತ್ತು ನಗರಶಾಖೆ ಸಂಘಟನಾ ಸಮಿತಿ ಸದಸ್ಯರೊಬ್ಬರು ಸೇರಿದಂತೆ ಬಂಧನಕ್ಕೊಳಗಾಗಿದ್ದ 15 ವಿದ್ಯಾರ್ಥಿಗಳ ನೆರವಿಗೆ ಬಂದಿರುವ ಸಂಘದ ಹಿತೈಷಿ ಕಾಂ. ವೆಂಕಟೇಶ ಗೌಡರು ಮೊಕದ್ದಮೆಯ ವಿಚಾರಣೆಯಲ್ಲಿ ವಿದ್ಯಾರ್ಥಿಗಳ ಪರವಾಗಿ ನ್ಯಾಯಾಲಯದಲ್ಲಿ ವಾದಿಸಲು ಮುಂದೆ ಬಂದಿದ್ದಾರೆ.

ಮೇ 20 ರಂದು ಎಸ್.ಎಫ್.ಐ. ಮುಖಂಡರಾದ ಕಾಂ. ಗೋಪಾಲಕೃಷ್ಣ ಮತ್ತು ಕಾಂ. ರಾಜಣ್ಣನವರು ಒಂದು ದಿನ ಉಪವಾಸ ಸತ್ಯಾಗ್ರಹ ನಡೆಸಿ ಮುಷ್ಕರಕ್ಕೆ ಬೆಂಬಲ ಕೋರಿದರು.

ಇಷ್ಟಾದರೂ ಗಮನ ಹರಿಸದಿದ್ದ ಸರ್ಕಾರದ ನಿರ್ಲಕ್ಷ್ಯ ಧೋರಣೆಯ ವಿರುದ್ಧ ಹೋರಾಟವನ್ನು ತೀವ್ರಗೊಳಿಸಲು ಮೇ 21ರಿಂದ ವಿದ್ಯಾರ್ಥಿ ಕ್ರಿಯಾಸಮಿತಿಯ - ಸಂಚಾಲಕ ಡಾ॥ ವಸಂತಕುಮಾರ್ ಭಟ್ ಆಮರಣಾಂತ ಸತ್ಯಾಗ್ರಹ ಪ್ರಾರಂಭಿಸಿದರು.

ವಿದ್ಯಾರ್ಥಿಗಳಿಗೆ ಸಂದರ್ಶನ ನೀಡುವುದಕ್ಕೆ ಒಪ್ಪದಿದ್ದ ಮಾನ್ಯ ಆರೋಗ್ಯ ಮಂತ್ರಿಗಳು ಇಪ್ಪತ್ತೆಂಟು ದಿನಗಳ ಕಾಲ ವಿದ್ಯಾರ್ಥಿಗಳು ನಡೆಸಿದ ದಿಟ್ಟ ಹೋರಾಟಕ್ಕೆ ಮಣಿದು ಮೇ 23 ರಂದು ಮೂರು ಗಂಟೆಗಳ ಕಾಲ ಕ್ರಿಯಾಸಮಿತಿ ಮುಖಂಡರ ಸಂಗಡ ಮಾತುಕತೆ ನಡೆಸಿ ಏಳು ಬೇಡಿಕೆಗಳನ್ನು ತಕ್ಷಣ ಈಡೇರಿಸಲು ಒಪ್ಪಿ ಸಂಬಂಧಪಟ್ಟ ಅಧಿಕಾರಿಗಳಿಗೆ ಈ ಬಗ್ಗೆ ಸ್ಥಳದಲ್ಲೇ ನಿರ್ದೇಶನ ನೀಡಿದರು. ಆಸ್ಪತ್ರೆ ಮತ್ತು ಕಾಲೇಜುಗಳ ಪರಿಸ್ಥಿತಿಯ ಬಗ್ಗೆ ಸ್ವತಃ ನೋಡಿ ತಿಳಿಯಲು ತಕ್ಷಣದಲ್ಲಿ ಅನಿರೀಕ್ಷಿತ ಭೇಟಿಯೊಂದನ್ನು ನೀಡುವುದಾಗಿ ಮಾನ್ಯ ಮಂತ್ರಿಗಳು ತಿಳಿಸಿದ್ದಾರೆ. ಸರ್ಕಾರದ ಈ ಭರವಸೆಯ ಮೇರೆಗೆ ಕ್ರಿಯಾಸಮಿತಿಯು ಮೇ 23ರಂದು ಮುಷ್ಕರವನ್ನು ತಾತ್ಕಾಲಿಕವಾಗಿ ಹಿಂತೆಗೆದುಕೊಂಡಿದೆ.

●

ಜನರ ಸಮಸ್ಯೆ ಬಗೆಹರಿಸಲು ಮಂತ್ರಿಗಳಿಗೆ ಪುರುಸೊತ್ತಿಲ್ಲ

ಇಂದಿರಾ ಕಾಂಗ್ರೆಸಿನೊಳಗಿನ ಆಂತರಿಕ ಜಗಳ ತಂತಮ್ಮ ಕುರ್ಚಿಗಳ ಭದ್ರತೆ ಮೊದಲಾದ ಸಮಸ್ಯೆಗಳಲ್ಲೇ ಮಂತ್ರಿಗಳೆಲ್ಲ ಮಗ್ನರಾಗಿರುವುದರಿಂದ ಕಾರ್ಮಿಕರ, ವಿದ್ಯಾರ್ಥಿಗಳ, ಸಾರ್ವಜನಿಕರ ಸಮಸ್ಯೆಗಳನ್ನು ಪರಿಹರಿಸಲು ಅವರಿಗೆ ಪುರುಸೊತ್ತಿಲ್ಲ. ಮಂತ್ರಿಗಳ ಗಮನ ಸೆಳೆಯಲು ತೀವ್ರವಾದ ಹೋರಾಟ ಅಗತ್ಯವೆಂದು ರಾಜ್ಯ ಸಿ. ಐ. ಟಿ. ಯು. ಉಪಾಧ್ಯಕ್ಷರಾದ ಎನ್. ಕೆ. ಉಪಾಧ್ಯಾಯರು, ನಾಗರೀಕ ಸಮಿತಿ ಪರವಾಗಿ ತಾ. 15ರಂದು ಬೆಳಗಾವಿಯಲ್ಲಿ ಏರ್ಪಡಿಸಿದ ಸಾರ್ವಜನಿಕ ಸಭೆಯಲ್ಲಿ ಕರೆಕೊಟ್ಟರು. 8 ತಿಂಗಳಿಂದ ತಮ್ಮ ಬೇಡಿಕೆಗಳ ಸಲುವಾಗಿ ಹೋಮಿಯೋಪತಿ ವಿದ್ಯಾರ್ಥಿಗಳೂ, ಸ್ಟಾಫಗಳೆಲ್ಲ ನಡೆಸುತ್ತಿರುವ ಮುಷ್ಕರ-ಅನ್ನಸತ್ಯಾಗ್ರಹಕ್ಕೆ ಬೆಂಬಲ ವ್ಯಕ್ತಪಡಿಸಲು ಮೆರವಣಿಗೆ ಸಭೆ ಏರ್ಪಡಿಸಲಾಗಿತ್ತು. ಇಂಡಲ ಕಾರ್ಖಾನೆಯ ಲಾಕೌಟ್, ವಿದ್ಯುತ್ ಚಾಲಿತ ಸಾವಿರಾರು ಮಗ್ಗಗಳ ಮುಚ್ಚುವಿಕೆ ಹೋಮಿಯೋಪತಿ ವಿದ್ಯಾರ್ಥಿಗಳ ಹೋರಾಟದಿಂದಾಗಿ ಬೆಳಗಾವಿಯ ಪರಿಸ್ಥಿತಿ ಪ್ರಕ್ಷುಬ್ಧವಾಗಿದ್ದರೂ ಈ ಸಮಸ್ಯೆಗಳ ಪರಿಹಾರಕ್ಕೆ ಸರಕಾರ ಪ್ರಯತ್ನಿಸದಿರುವುದನ್ನು ಬಲವಾಗಿ ಖಂಡಿಸಿ ಇಂಥ ಸಮಸ್ಯೆಗಳನ್ನು ಪ. ಬಂಗಾಳದ ಜ್ಯೋತಿ ಬಸು ಸರಕಾರ ಯಾವ ರೀತಿ ಬಗೆಹರಿಸುತ್ತದೆಂದು ತಿಳಿಸಿ, ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳನ್ನು ಬಲಗೊಳಿಸುವುದರ ಅಗತ್ಯ ಒತ್ತಿ ಹೇಳಿದರು. ಹಿರಿಯ ರಾಜಕಾರಣಿ ಕಾಮಅಪ್ಪೆ ಅಧ್ಯಕ್ಷತೆ ವಹಿಸಿದ್ದರು. ದಿಲೀಪ ನ್ಯಾಕ, ಎಸ್. ಎಂ. ಯಾಹ್ಯಾ ಪಾಟೆಕರ ಮೊದಲಾದವರು ಭಾಷಣ ಮಾಡಿದರು.

ತಾ. 13-14ರಂದು ಡಿ. ಸಿ. ಆಫೀಸಿನೆದುರಿಗೆ ಮತಪ್ರದರ್ಶನ ಮಾಡಿದ ಸುಮಾರು 400 ವಿದ್ಯುತ್ ಚಾಲಿತ ಮಗ್ಗಗಳ ಕಾರ್ಮಿಕರನ್ನು ಪೋಲೀಸರು ಬಂಧಿಸಿದ್ದಾರೆ. ಜಾಮೀನಕೊಟ್ಟು ಹೊರಬರಲು ನಿರಾಕರಿಸಿದ್ದರಿಂದ ಅವರನ್ನೆಲ್ಲಾ ಹಿಂಡಲಗ ಜೈಲಿನಲ್ಲಿಡಲಾಗಿದೆ. ಕಾರ್ಮಿಕ ಮುಖಂಡ ದಿಲೀಪಕಾಮತ ಕೂಡ ಬಂಧನದಲ್ಲಿದ್ದಾರೆ.

○

ಭೂಹೀನರ ಕೃಷಿ ಕಾರ್ಮಿಕ ಮನವಿ

ಕೋಲಾರ ಜಿಲ್ಲೆ ಶಿಡ್ಲಘಟ್ಟ ತಾಲ್ಲೂಕಿನ ಕಸಬಾ ಹೋಬಳಿಯ ಹನುಮಂತಪುರ ಗ್ರೂಪ್ ಪಂಚಾಯ್ತಿಯ ವರದನಾಯಕನಹಳ್ಳಿಯ ಭೂಹೀನ ಹರಿಜನರು ಮತ್ತು ಅಲ್ಪಸಂಖ್ಯಾತ ಕೃಷಿಕೂಲಿಗಾರರು ತಮ್ಮ ಅಹವಾಲುಗಳಿಗಾಗಿ ರಾಜ್ಯದ ಮುಖ್ಯಮಂತ್ರಿಗಳಿಗೆ ಅರ್ಜಿ ಬರೆದುಕೊಂಡಿದ್ದಾರೆ. ಅವರ ಗ್ರಾಮದಲ್ಲಿ ಬಂಜರು ಭೂಮಿ ಸಾಕಷ್ಟಿದ್ದರೂ ಭೂಹೀನರಿಗೆ ಮಂಜೂರಾಗಿಲ್ಲ. ಆದರೆ ಶ್ರೀಮಂತ ರೈತರಿಗೆ ಮಂಜೂರಾಗಿದೆ. ಈ ಅನ್ಯಾಯವನ್ನು ಸರಿಪಡಿಸಲು ಅವರು ಮನವಿ ಮಾಡಿದ್ದಾರೆ.

○

ಕುಂದಾಪುರದಲ್ಲಿ ಡಿ. ವೈ. ಎಫ್. ಸಭೆ

ದ. ಕ. ಜಿಲ್ಲೆಯ ಕುಂದಾಪುರ ತಾಲ್ಲೂಕ್ ಮಟ್ಟದ ಯುವಜನ ಸಂಘಟನೆಯ ವಿಸ್ತೃತ ಸಭೆಯು 25-5-80ರಂದು ನಡೆಯಿತು. ಇದರಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ರಾಜ್ಯ ರೈತಸಂಘದ ಕಾರ್ಯದರ್ಶಿ ಕಾಂ. ಪಿ ರಾಮಚಂದ್ರ ರಾವ್‌ರವರು "...ಸಮಾಜದ ಪ್ರಗತಿಪರ ಬದಲಾವಣೆಯಲ್ಲಿ ಯುವಜನತೆ ಮಹತ್ತರವಾದ ಪಾತ್ರವನ್ನು ವಹಿಸಬೇಕು. ವೈಜ್ಞಾನಿಕವಾಗಿ ಚಿಂತಿಸಿದಾಗ ಸಮಸ್ಯೆ ಮತ್ತು ಅದರ ಪರಿಹಾರ ಮಾರ್ಗ ಗೋಚರಿಸುತ್ತದೆ. ಯುವಜನರಲ್ಲಿ ನಿರಾಶವಾದ ಬೆಳೆಯುತ್ತಿರುವುದು ಭಾರಿ ಅಪಾಯಕಾರಿ..." ಎಂದರು.

ಸಭೆಯ ಅಧ್ಯಕ್ಷತೆಯನ್ನು ತಾಲ್ಲೂಕ್ ಯುವಜನ ಸಂಘಟನೆಯ ಅಧ್ಯಕ್ಷರಾದ ಕಾಂ. ವೆಂಕಟೇಶ್ ಕೋಣಿಯವರು ವಹಿಸಿದ್ದರು. ಡಿ.ವೈ.ಎಫ್.ನ ಓರ್ವಸಂಚಾಲಕರಾದ ಕಾಂ. ಆನಂದ ಭಂಡಾರಿಯವರು ರಾಯಚೂರಿನಲ್ಲಿ ನಡೆದ ಯುವಜನರ ಸಮಾವೇಶದ ವರದಿ ನೀಡಿದರು, ಕಾಂ. ಆರ್. ಜಯಕುಮಾರ್‌ರವರು ಇಂದು ಯುವಜನತೆ ಸರಕಾರದ ಎದುರು ಮಂಡಿಸಬೇಕಾದ ಬೇಡಿಕೆಗಳ ಬಗ್ಗೆ ವಿವರ ನೀಡಿದರು. ತಾಲ್ಲೂಕ್ ಯುವಕರ ಕಾರ್ಯದರ್ಶಿ ಕಾಂ. ವಿ.ಮಹಾಬಲರು ಸ್ವಾಗತಿಸಿದರು.

ರಾಯಚೂರಿನಲ್ಲಿ ನಡೆದ ಯುವಜನರ ಸಮಾವೇಶದಲ್ಲಿ ಕೈಗೊಂಡ ನಿರ್ಧಾರದ ಅನ್ವಯ ಈ ಹಿಂದೆ "ಯುವಕ ಮಂಡಲ" ಎಂಬ ಹೆಸರಿನಿಂದ ಕರೆಯುತ್ತಿದ್ದ ಸಂಘಟನೆಯ ಹೆಸರನ್ನು "ಕರ್ನಾಟಕ ಪ್ರಜಾಸತ್ತಾತ್ಮಕ ಯುವಜನ ಸಂಘಟನೆ"- ಎಂದು ಬದಲಾಯಿಸಲು ನಿರ್ಧರಿಸಲಾಯಿತು.

●

ಸಂಸೆ ಕಾರ್ಮಿಕರ ವಿವಾದವನ್ನು ಪರಿಹರಿಸಲು ಲೇಬರ್ ಕಮೀಷನರಿಗೆ ಮನವಿ

ಮೂಡಿಗೆರೆ ತಾಲ್ಲೂಕಿನಲ್ಲಿರುವ ಸಂಸೆ ಟೀ ತೋಟಕಾರ್ಮಿಕರ ಬೇಡಿಕೆಗಳನ್ನು ಈಡೇರಿಸಲು, ಅಲ್ಲಿಯ ಸಮಸ್ಯೆಯನ್ನು ಪರಿಹರಿಸಲು ತುರ್ತು ಕ್ರಮ ತೆಗೆದುಕೊಳ್ಳಬೇಕೆಂದೂ ಸಿ.ಐ.ಟಿ.ಯು. ರಾಜ್ಯ ಸಮಿತಿಯ ಅಧ್ಯಕ್ಷರಾದ ಕಾಂ. ಸೂರ್ಯನಾರಾಯಣ ರಾವ್ ಮತ್ತು ಪ್ರಧಾನ ಕಾರ್ಯದರ್ಶಿ ಕಾಂ. ಸಿ. ನಂಜುಂಡಪ್ಪನವರು ತಾ॥ 2-6-1980ರಂದು ಬೆಂಗಳೂರಿನಲ್ಲಿ ಲೇಬರ್ ಕಮೀಷನರ್ ಎಚ್. ಎನ್. ಶೆಟ್ಟಿಯವರನ್ನು ಭೇಟಿ ಮಾಡಿ ಲಿಖಿತ ಮನವಿಯನ್ನು ಸಲ್ಲಿಸಿ ಕೇಳಿಕೊಂಡಿದ್ದಾರೆ. ಲೇಬರ್ ಕಮೀಷನರ್‌ರವರು ಹಾಸನದ ಡೆಪ್ಯುಟಿ ಲೇಬರ್ ಕಮೀಷನರಿಗೆ ತುರ್ತು ನಿರ್ದೇಶನ ಕೊಡುವುದಾಗಿ ತಿಳಿಸಿರುವುದಾಗಿ ತಿಳಿದುಬಂದಿದೆ.

●

ಕುಕ್ಕುಂದೂರು ಗ್ರಾಮದಲ್ಲಿ ಸಿಐಟಿಯು ಸಂಘಟನೆ

ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಕಳ ತಾಲ್ಲೂಕಿನ ಕುಕ್ಕುಂದೂರು ಗ್ರಾಮದಲ್ಲಿ ಸಿ. ಐ. ಟಿ. ಯು. ಹೊಸ ಕಾರ್ಮಿಕ ಸಂಘಟನೆಯನ್ನು ಸ್ಥಾಪಿಸಲಾಗಿದೆ. ಈ ಹೊಸ ಸಂಘಟನೆಯ ಅಧ್ಯಕ್ಷರಾಗಿ ವಿಶ್ವನಾಥ ಅವರನ್ನೂ ಉಪಾಧ್ಯಕ್ಷ ಅವರಿಗೆ ಕೃಷ್ಣನ್ ಅವರನ್ನೂ ಕಾರ್ಯದರ್ಶಿಯಾಗಿ ಕೆ. ಮಹಾಲಿಂಗ, ಸಹಕಾರ್ಯದರ್ಶಿಯಾಗಿ ವಿ. ಆರ್. ಮಾಣಿಕ್ಯಂ ಅವರನ್ನೂ ಖಜಾಂಚಿಯಾಗಿ ಕೆ. ಸುಬ್ರಹ್ಮಣ್ಯ ಅವರನ್ನು ನೇಮಿಸಲಾಗಿದೆ. ಈ ಸಂಘಟನೆಗೆ ಕೆ. ಎನ್. ದಿವಾಕರನ್ ಮುಂದಾಳುತನ ವಹಿಸಿದ್ದಾರೆ.

ಹೊಸ ಸಂಘದ ಸ್ಥಾಪನೆಯಾದ ನಂತರ 30-5-80ರಂದು ಸಿ. ಐ. ಟಿ. ಯು. ಸ್ಥಾಪನೆಯ 10ನೇ ವಾರ್ಷಿಕೋತ್ಸವ ಆಚರಿಸಲಾಯಿತು. ಕೆ. ವಿಶ್ವನಾಥ ಅವರು ಧ್ವಜಾರೋಹಣ ಮಾಡಿದ ನಂತರ, ಕೆ. ಎನ್. ದಿವಾಕರನ್ ಭಾಷಣ ಮಾಡಿದರು. ಕಾಂ. ಸೂರಿ ಮತ್ತು ಇತರ ಮುಖಂಡರನ್ನು ಬೆಂಗಳೂರಿನಿಂದ ಗಡೀಪಾರು ಮಾಡಬೇಕೆಂಬ ಕ್ರಮವನ್ನು ಪ್ರಬಲವಾಗಿ ಖಂಡಿಸಿದರು. ಸಂಸೆ ತೋಟದ ಕಾರ್ಮಿಕರ ಬೇಡಿಕೆಗಳ ಮುಷ್ಕರಕ್ಕೆ ಬೆಂಬಲ ಸೂಚಿಸಲಾಯಿತು. ದಕ್ಷಿಣ ಕನ್ನಡ ಜಿಲ್ಲೆಯ ಕಲ್ಲುಕುಟಿಗರ ಸಂಘಟನೆ ಅವಶ್ಯವಾಗಿ ಆಗಬೇಕಿದೆಯೆಂದು ಸಭೆಯಲ್ಲಿ ಅಭಿಪ್ರಾಯಪಡಲಾಯಿತು. ಅಧ್ಯಕ್ಷ ವಿಶ್ವನಾಥ್, ಕೃಷ್ಣನ್ ಹಾಗೂ ಚಿನ್ನಸ್ವಾಮಿ ಸಭೆಯಲ್ಲಿ ಮಾತನಾಡಿದರು.

●

ಸಿ.ಐ.ಟಿ.ಯು. ಕಾರ್ಮಿಕ ಸಂಘಗಳ ಕಾರ್ಯದರ್ಶಿಗಳ ಗಮನಕ್ಕೆ

ಸಿ. ಐ. ಟಿ. ಯು. ಶಾಲೆಯು ಬೆಂಗಳೂರಿನಲ್ಲಿ ಜೂನ್ 11, 12ರಂದು (ಮೊದಲು ತಿಳಿಸಿರುವಂತೆ 9, 10ರಂದು ಅಲ್ಲ) ದೇವಾಂಗಸಂಘ ಮಂದಿರದಲ್ಲಿ [ಕಾರ್ಪೊರೇಷನ್ ಆಫೀಸಿನ ಹಿಂದೆ] ನಡೆಯುತ್ತದೆ. ಶಾಲೆಗೆ ಬರುವವರು ಜೂನ್ 11ರಂದು ಬೆಳಿಗ್ಗೆ 10ಗಂಟೆಯ ಮೊದಲು ಶಾಲೆ ನಡೆಯುವ ಸ್ಥಳವನ್ನು ತಲಪಬೇಕು.

ಸಿ. ನಂಜುಂಡಪ್ಪ
ಪ್ರಧಾನ ಕಾರ್ಯದರ್ಶಿ
ಸಿ. ಐ. ಟಿ. ಯು. ಕರ್ನಾಟಕ ರಾಜ್ಯಸಮಿತಿ

ಸಂಸೆ ಕಾರ್ಮಿಕರ ಮೇಲೆ ದಬ್ಬಾಳಿಕೆಯನ್ನು ನಿಲ್ಲಿಸಲು ಐ.ಜಿ.ಪಿ.ಗೆ ಮನವಿ

ಚಿಕ್ಕಮಗಳೂರು ಜಿಲ್ಲೆಯ ಸಂಸೆ ಟೀ ತೋಟಕಾರ್ಮಿಕರ ಮೇಲೆ ತಾ॥ 16-5-80ರಿಂದ ನಡೆಯುತ್ತಿರುವ ಪೋಲೀಸ್ ದಬ್ಬಾಳಿಕೆಯನ್ನು ಕೂಡಲೇ ನಿಲ್ಲಿಸಲು ತುರ್ತುಕ್ರಮ ತೆಗೆದುಕೊಳ್ಳಬೇಕೆಂದೂ, ಈ ಬಗ್ಗೆ ಪ್ರೊಬೇಷನರಿ ಡೆಪ್ಯುಟಿ ಎಸ್. ಪಿ. ರಾಮಕೃಷ್ಣರ ಪಾತ್ರ ಮತ್ತು ವರ್ತನೆಯ ಬಗ್ಗೆ ತನಿಖೆ ನಡೆಸಿ ಕ್ರಮ ತೆಗೆದುಕೊಳ್ಳಬೇಕೆಂದೂ, ಸಂಸೆ ಟೀ ತೋಟದಲ್ಲಿ ಶಾಂತ ಪರಿಸ್ಥಿತಿ ನೆಲೆಸುವಂತೆ ಮಾಡಿ ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸಲು ಸಹಕರಿಸಬೇಕೆಂದೂ ಸಿ.ಐ ಟಿ.ಯು. ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಕಾಂ. ಎನ್. ಎಲ್ ಉಪಾಧ್ಯಾಯ ಮತ್ತು ಕಾಂ. ಸಿ. ನಂಜುಂಡಪ್ಪನವರು ತಾ॥ 30-5-80ರಂದು ಬೆಂಗಳೂರಿನಲ್ಲಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲೀಸ್ ಎಚ್. ವೀರಭದ್ರಯ್ಯನವರನ್ನು ಭೇಟಿ ಮಾಡಿ, ಲಿಖಿತ ಮನವಿಯನ್ನು ಸಲ್ಲಿಸಿ ಕೇಳಿಕೊಂಡಿದ್ದಾರೆ. ಐ. ಜಿ. ಪಿ. ಯವರು ಚಿಕ್ಕಮಗಳೂರಿನ ಎಸ್. ಪಿ. ಯವರಿಗೆ ನಿಷ್ಪಕ್ಷಪಾತವಾಗಿ ವರ್ತಿಸುವಂತೆ ತಿಳಿಸಿ ಸೂಕ್ತಕ್ರಮ ತೆಗೆದುಕೊಳ್ಳುವುದಾಗಿ ತಿಳಿಸಿದರು.

ಉಡುಪಿ ರೈತ ಕಾರ್ಯಕರ್ತರ ತರಬೇತಿ ಶಿಬಿರ

ದ.ಕ. ಜಿಲ್ಲಾ ಉಡುಪಿ ತಾಲ್ಲೂಕು ರೈತಸಂಘದ ಕಾರ್ಯಕರ್ತರ ತರಬೇತಿ ಶಿಬಿರವು ತಾ॥ 23-5-80ರಂದು ಪಡುಬಿದ್ರಿಯಲ್ಲಿ ನಡೆಯಿತು. ಕಾಂ. ರಾಮ ಕೆ. ಕುಂದರರು ಅಧ್ಯಕ್ಷತೆ ವಹಿಸಿದ್ದರು, ಪ್ರಾರಂಭದಲ್ಲಿ ತಾಲ್ಲೂಕು ರೈತಸಮಿತಿಯ ಕಾರ್ಯದರ್ಶಿ ಡೇವಿಡ್ ಎ. ಕರ್ಕಡರು ಸ್ವಾಗತಿಸಿ, ಶಿಬಿರದ ಮಹತ್ವವನ್ನು ತಿಳಿಸಿದ ನಂತರ ಜಿಲ್ಲಾ ರೈತಸಂಘದ ಕಾರ್ಯದರ್ಶಿ ಕಾಂ. ಯು. ಜನಾರ್ಧನ ನಾಯ್ಕರು ಸ್ಥೂಲವಾಗಿ ಜಿಲ್ಲೆಯ ರೈತರ ಹೋರಾಟದ ಪರಂಪರೆ ತಿಳಿಸಿದರು. ಮುಖ್ಯ ಪಾಠವನ್ನು ಕರ್ನಾಟಕ ರಾಜ್ಯ ರೈತಸಂಘದ ಪ್ರಧಾನ ಕಾರ್ಯದರ್ಶಿ ಕಾಂ. ಪಿ.ರಾಮಚಂದ್ರರಾಯರು ಮಾಡಿದರು. ರೈತಸಂಘದ ಸ್ಥಾಪನೆಯಿಂದ ಹಿಡಿದು ಸ್ವಾತಂತ್ರ್ಯಹೋರಾಟದೊಂದಿಗೆ ಹೇಗೆ ರೈತ ಚಳುವಳಿ ಜತೆಗೂಡಿ ಕಾರ್ಮಿಕ ಚಳುವಳಿಯೊಂದಿಗೆ ಬೆರೆತು ಮುಂದುವರಿತು ಭೂಮಿಗಾಗಿ ನಡೆದ ತೆಲಂಗಾಣದ ರೈತರ ಸ್ಫೂರ್ತಿದಾಯಕ ಹೋರಾಟದ ವಿವರ ನೀಡಿದರು.

ಬಂಡವಾಳಶಾಹಿ ಸರಕಾರಗಳು ತರುವ ಭೂಶಾಸನಗಳಿಂದ ರೈತರ ಸಮಸ್ಯೆ ಪರಿಹಾರವಾಗುವುದಿಲ್ಲ, ಬದಲಾಗಿ ಭೂಮಿ ಕಳಕೊಂಡು ನಿರ್ಗತಿಕರಾಗಿ ಕೃಷಿ ಕೂಲಿಗಾರರಾಗಿ ಹೇಗೆ ರೈತರು ಬದಲಾಗುತ್ತಾರೆ, ಸಾಲದ ಭಾರದಿಂದ ಜರ್ಜರಿತರಾಗುತ್ತಾರೆ, ಸ್ವಾತಂತ್ರ್ಯ ಪೂರ್ವದಲ್ಲಿ ಶೇಕಡಾ 15 ಇದ್ದ ಕೃಷಿ ಕಾರ್ಮಿಕರ ಸಂಖ್ಯೆ ಇಂದು ಶೇಕಡಾ 35ಕ್ಕೆ ಹೇಗೆ ಏರಿದೆ ಎಂದು ವಿವರವಾಗಿ ತಿಳಿಸಿದರು. ಎಲ್ಲಾ ಅಪಪ್ರಚಾರಗಳನ್ನು ಮೆಟ್ಟಿನಿಂತು, ಹಳ್ಳಿಯ ಬಡವರು ಕಾರ್ಮಿಕವರ್ಗದ ಜತೆಗೂಡಿ ಪ್ರಜಾಪ್ರಭುತ್ವ ಚಳುವಳಿಯನ್ನು ಮುಂದುವರಿಸಿದರೆ ಮಾತ್ರ ರೈತರ ಭೂಮಿಯ ಸಮಸ್ಯೆಗೆ ಪರಿಹಾರವಿದೆ. ಅದಕ್ಕಾಗಿ ಸಂಘಟನೆ ಬೆಳೆಯಬೇಕಾಗಿದೆ, ಬಲಿಷ್ಠವಾಗಬೇಕಾಗಿದೆ ಎಂದು ತಿಳಿಸಿದರು. ಶಿಬಿರದಲ್ಲಿ ತಾಲ್ಲೂಕಿನ ಬೇರೆಬೇರೆ ಭಾಗಗಳಿಂದ 40ಕ್ಕೂ ಮಿಕ್ಕಿದ ಕಾರ್ಯಕರ್ತರು ಭಾಗವಹಿಸಿದ್ದರು. ಜಿಲ್ಲಾ ರೈತಸಂಘದ ಅಧ್ಯಕ್ಷ ಅಬ್ರಹಾಂ ಕರ್ಕಡರು ಭಾಗವಹಿಸಿ ನೇತೃತ್ವ ನೀಡಿದರು.

●

ತಾರೀಖು 16-5-80ನೇ ಶುಕ್ರವಾರ "ಕೂಸು ನಿಲಯ" ಎಂಬ ಗೃಹಪ್ರವೇಶದ ಸವಿನೆನಪಿಗಾಗಿ ಉಡುಪಿ ತಾಲ್ಲೂಕು, ಪುತ್ತೂರು ಪಂಚಾಯ್ತ್ ಸದಸ್ಯ ಎನ್.ಸಂಜೀವ ಜತ್ತನ್, ಪೋಸ್ಟ್-ನಿಟ್ಟೂರು, ಇವರು ರೂ. 25ನ್ನು ಐಕ್ಯರಂಗಕ್ಕೆ ಕಳುಹಿಸಿಕೊಟ್ಟಿದ್ದಾರೆ. ಐಕ್ಯರಂಗವು ಇವರಿಗೆ ಶುಭಾಶಯಗಳೊಂದಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

ಪ್ರತಿಭಟನೆಗಳನ್ನು ಎದುರಿಸಲಿರುವ ವಿಧಾನಸಭಾ ಅಧಿವೇಶನ

(ಒಂದನೇ ಪುಟದಿಂದ)

ಕ್ಕಾರಿ ಪರದಾಡುವುದು ಇನ್ನೊಂದೆಡೆ. ವಿದ್ಯಾರ್ಥಿ-ಯುವಜನತೆಯ ಭವಿಷ್ಯವು ಅನಿಶ್ಚಿತತೆಯಿಂದ ತುಂಬಿದೆ. ಸರಕಾರದ ಘೋಷಣೆಗಳು ಅನಿಶ್ಚಿತತೆಯನ್ನು ಕಡಿಮೆ ಮಾಡುವುದಕ್ಕೆ ಬದಲು, ಶೈಕ್ಷಣಿಕ ರಂಗದಲ್ಲಿನ ಕುಲಿಗೆಯನ್ನು ಹೆಚ್ಚುವಂತೆ ಮಾಡುತ್ತಲಿವೆ.

ಇವೆಲ್ಲವುಗಳ ಮಧ್ಯೆ, ರಾಜ್ಯದ ಕಾಂಗ್ರೆಯೊಳಗೆ ಅತೃಪ್ತಿಯೂ ಹೆಚ್ಚುತ್ತಲಿದೆ. ರವಿನ್ಯೂ ಮಂತ್ರಿ ಬಂಗಾರಪ್ಪನವರು ತನಗೂ ಮತ್ತು ಮುಖ್ಯಮಂತ್ರಿಯವರಿಗೂ ಏನೇನೂ ಭಿನ್ನಾಭಿಪ್ರಾಯಗಳಿಲ್ಲವೆಂದು (ಮುಖ್ಯಮಂತ್ರಿಯವರು ಮಂತ್ರಿಮಂಡಲದಲ್ಲಿ ಬದಲಾವಣೆ ತರುವ ಮತ್ತು ವಿಸ್ತಾರಗೊಳಿಸುವ ಯೋಜನೆ ಹಾಕಿಕೊಂಡಿರುವ ಸಂದರ್ಭದಲ್ಲಿ) ಹೇಳುವುದನ್ನು ನೋಡಿದರೆ, ಭಿನ್ನಾಭಿಪ್ರಾಯಗಳು ಇನ್ನೂ ಹೆಚ್ಚಿವೆ ಎಂಬುದು ಸ್ಪಷ್ಟ.

ಈ ಎಲ್ಲದರ ಹಿನ್ನೆಲೆಯಲ್ಲಿ ಜೂನ್ ಎರಡನೇ ವಾರ ವಿಧಾನಸಭೆಯ ಅಧಿವೇಶನವು ಸೇರಲಿದೆ. ಈ ಬಾರಿಯ ಅಧಿವೇಶನವು ಕಾರ್ಮಿಕರ ಮತ್ತು ದಲಿತರ ಪ್ರತಿಭಟನೆಯನ್ನು ಎದುರಿಸಬೇಕಾಗುತ್ತದೆ. ಸರಕಾರದ ಕಾರ್ಮಿಕ ವಿರೋಧಿ ಕ್ರಮಗಳನ್ನು ವಿರೋಧಿಸಿ ನಗರದ ಎಲ್ಲಾ ಕೇಂದ್ರ ಕಾರ್ಮಿಕ ಸಂಘಟನೆಗಳು ಮತ್ತು ಇತರ ಕಾರ್ಮಿಕ ಸಂಘಟನೆಗಳೂ ಸೇರಿ ತಾರೀಕು 9 ರಂದು ವಿಧಾನಸೌಧದೆದುರು ಬೃಹತ್ ಪ್ರತಿಭಟನಾ ಕಾರ್ಯಕ್ರಮವನ್ನು ನಡೆಸಲಿವೆ. ಹಾಗೆಯೇ ಹುಣಿಸೆಕೋಟೆ ಕೊಲೆ ಪ್ರಕರಣದಲ್ಲಿ ಅಪಾದಿತರ ಮೇಲೆ ಕ್ರಮತೆಗೆದುಕೊಳ್ಳುವುದಕ್ಕಾಗಿ ಒತ್ತಾಯಿಸಲು ಮತ್ತು ದಲಿತರ ಮೇಲೆ ನಡೆಯುವ ದಬ್ಬಾಳಿಕೆಯನ್ನು ಪ್ರತಿಭಟಿಸಲು ದಲಿತ ಸಂಘರ್ಷ ಸಮಿತಿಯ ನೇತೃತ್ವದಲ್ಲಿ ಹುಣಿಸೆಕೋಟೆಯಿಂದ ಕಾಲ್ನಡಜಾತಾವು ಹೊರಟು, 12ರಂದು ನಗರವನ್ನು ತಲುಪಿ, ಅಂದು ವಿಧಾನ ಸೌಧದೆದುರು ಪ್ರತಿಭಟಿಸಲಾಗುವುದು.

ಬೆಂಗಳೂರಿನಲ್ಲಿ ಪ್ರಾರಂಭಗೊಳ್ಳುವ ಈ ಪ್ರತಿಭಟನಾ ಕಾರ್ಯಕ್ರಮಗಳು ಮತ್ತು ಸಂಯುಕ್ತ ಚಳವಳಿಗಳನ್ನು ರಾಜ್ಯದಾದ್ಯಂತ ಬೆಳೆಸಲೇಬೇಕಾಗಿದೆ. ರಾಷ್ಟ್ರೀಯ ಮಟ್ಟದಲ್ಲಿ ಎಡಪ್ರಜಾಪ್ರಭುತ್ವ ಶಕ್ತಿಗಳ ಐಕ್ಯತೆಗಾಗಿ ನಡೆಯುವ ಪ್ರಯತ್ನ ರಾಜ್ಯದಲ್ಲಿ ಅರ್ಥಪೂರ್ಣವಾಗಬೇಕಾದರೆ ಜನಕೀಯ ಸಮಸ್ಯೆಗಳ ಬಗ್ಗೆ ಎಡಪ್ರಜಾಪ್ರಭುತ್ವ ಶಕ್ತಿಗಳು ಒಂದಾಗಿ ರಾಜ್ಯದಾದ್ಯಂತ ಪ್ರಬಲ ಹೋರಾಟವನ್ನು ನಡೆಸಬೇಕಾಗಿದೆ. ಎಡಪಕ್ಷಗಳ ಒಗ್ಗಟ್ಟಿನ ಆಧಾರಿತವಾಗಿ ಎಡಪ್ರಜಾಪ್ರಭುತ್ವ ಶಕ್ತಿಗಳ ಒಗ್ಗಟ್ಟನ್ನು ರಾಜ್ಯದಲ್ಲಿ ಬೆಳೆಸುವತ್ತ ಇನ್ನೂ ಹೆಚ್ಚಿನ ಪ್ರಯತ್ನಗಳು ಅವಶ್ಯ ಮತ್ತು ಚಾರಿತ್ರಿಕ ಅಗತ್ಯ.

●

ಸಂಪಾದಕೀಯ

(ಒಂದನೇ ಪುಟದಿಂದ)

ಬೇರೆಯಾಗುತ್ತಿತ್ತು. ಈ ಪಕ್ಷಗಳು ತಂತಮ್ಮ ಪ್ರಭಾವದ ಬಗ್ಗೆ ಮಿತಿಮೀರಿದ ಉತ್ಪ್ರೇಕ್ಷೆ ಹೊಂದಿದ್ದ ಪರಿಣಾಮವಾಗಿ ಪ್ರಜಾಪ್ರಭುತ್ವ ಶಕ್ತಿಗಳು ಒಂದಾಗಲು ಸಾಧ್ಯವಾಗಲಿಲ್ಲ. ಅದರ ಪರಿಣಾಮವಾಗಿ ವಿರೋಧ ಪಕ್ಷಗಳ ಮತಗಳು ಹಂಚಲ್ಪಟ್ಟು ಕಾಂಗ್ರೆ ಅಲ್ಪ ಮತ ಪಡೆದರೂ ಬಹುಸಂಖ್ಯಾತ ಸ್ಥಾನಗಳನ್ನು ಗೆಲ್ಲಲು ಸಾಧ್ಯವಾಯಿತು. ಇನ್ನು ಮುಂದಾದರೂ ಇದರಿಂದ ಪಾಠ ಕಲಿಯುವುದು ಅಗತ್ಯ.

ಚುನಾವಣೆಯ ಮುಂಚೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯು ಕೊಟ್ಟ ಎಚ್ಚರಿಕೆಯನ್ನು ಗಮನಿಸುವುದು ಅಗತ್ಯ. ಮುಖ್ಯವಾಗಿ, ರಾಜ್ಯಗಳ ಸ್ವಾಯತ್ತತೆಯ ರಕ್ಷಣೆಗೂ, ಪ. ಬಂಗಾಳ, ತ್ರಿಪುರಾ ಮತ್ತು ಕೇರಳ ರಾಜ್ಯಗಳಲ್ಲಿರುವ ಮೂರು ಎಡ ಪಕ್ಷಗಳ ನೇತೃತ್ವದ ಸರಕಾರಗಳ ರಕ್ಷಣೆಗೂ, ಸಾಮಾನ್ಯ ಜನತೆಯ ರಕ್ಷಣೆಗೂ, ಭದ್ರ ಆಡಳಿತಗೂ ಕಾಂಗ್ರೆಯನ್ನು ಸೋಲಿಸಬೇಕೆಂದು ನಮ್ಮ ಪಾರ್ಟಿ ಕರೆ ನೀಡಿತ್ತು. ಇದು ಭಾಗಶಃ ಕಾರ್ಯಗತವಾಗಿದೆ, ಆದರೆ ಹೆಚ್ಚಿನ ಪ್ರಾಂತಗಳಲ್ಲಿ ಕಾಂಗ್ರೆ ಗೆದ್ದಿರುವುದರಿಂದಲೂ, ಅದರಲ್ಲೂ ಸಂಜಯ್ ಗಾಂಧಿಯ ಗುಂಪು ಅಧಿಕ ಸಂಖ್ಯೆಯಲ್ಲಿ ಬಂದಿರುವುದರಿಂದಲೂ ಸರ್ವಾಧಿಕಾರಿ ಅಪಾಯ ತೀವ್ರವಾಗಿ ಬಂದಿದೆ.

ರಾಜ್ಯಸಭೆಯಲ್ಲಿ ಕಾಂಗ್ರೆಗೆ ಮೂರರಲ್ಲಿ ಎರಡರಷ್ಟು ಬಹುಮತ ಈಗ ಬರುವ ಸಾಧ್ಯತೆ ಇಲ್ಲದ್ದರಿಂದ ರಾಜ್ಯಾಂಗಕ್ಕೆ ತಿದ್ದುಪಡಿತರಬೇಕೆಂಬ ಬಯಕೆ ಕೂಡಲೇ ಈಡೇರುವುದು ಕಷ್ಟಸಾಧ್ಯವಾದರೂ ಅದರ ಅಪಾಯವಿದ್ದೇ ಇದೆ.

ದೇಶದ ಎಲ್ಲ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಕೂಡಲೇ ಎಚ್ಚೆತ್ತು ಐಕ್ಯತೆಯಿಂದ ಹೋರಾಡುವುದು ಅಗತ್ಯ. ಈ ಚುನಾವಣೆಯಲ್ಲಿ ಎಡ ಪಕ್ಷಗಳು ಒಂದಾಗಿ ನಿಂತಿದ್ದು ಸ್ವಾಗತಾರ್ಹವಾಗಿದೆ. ಎಲ್ಲ ಕ್ಷೇತ್ರಗಳಲ್ಲೂ ಇದನ್ನು ಬೆಳೆಸುವುದೂ, ಸಾಮೂಹಿಕ ಹೋರಾಟಗಳನ್ನು ನಡೆಸುವುದೂ ನಮ್ಮ ಕರ್ತವ್ಯ.

○

ರಿಕ್ಷಾ ಚಾಲಕರಿಗೆ ಹಿಂಸೆ
ಹೊಸಪೇಟೆ ಪೋಲೀಸರ ಸಾಹಸ

ಹಗಲಿರುಳೆನ್ನದೆ ಸದಾ ನಾಗರೀಕರ ಸೇವೆಯಲ್ಲಿ ತೊಡಗಿ ತಮ್ಮೊಟ್ಟೆ ಬಟ್ಟೆಗಳನ್ನು ತುಂಬಿಕೊಳ್ಳುವ ದುಡಿಯುವ ಜನಸಮೂಹದಲ್ಲಿ ರಿಕ್ಷಾ ಚಾಲಕರು ಕಡಿಮೆ ಸಂಖ್ಯೆಯಾದರೂ ಅವರ ಅಸ್ತಿತ್ವ ಮತ್ತು ದುಡಿಮೆಯನ್ನು ಕಡೆಗಣಿಸುವಂತಿಲ್ಲ. ಕಾಂಗ್ರೆ-ಜನತಾ ಸರ್ಕಾರಗಳ ಆದೇಶ ಪಡೆದು ದುಡಿಯುವ ಜನತೆಗೆ ಪೆಟ್ಟು ಕೊಡುವ ಪೋಲೀಸರು ಯಾವ ದುಡಿಯುವ ವಿಭಾಗಕ್ಕೂ ವಿನಾಯಿತಿ ನೀಡುವುದಿಲ್ಲ.

ಬಳ್ಳಾರಿ ಜಿಲ್ಲೆಯ ಹೊಸಪೇಟೆ ಪಟ್ಟಣದಲ್ಲಿ ರಿಕ್ಷಾ ನಡೆಸಿಕೊಂಡು ಬದುಕು ನೂಕುತ್ತಿರುವ ಬಡ ರಿಕ್ಷಾ ಚಾಲಕರ ಸಂಖ್ಯೆ ಸುಮಾರು ಎಂಟು ನೂರು. ಬದುಕಿನಲ್ಲಿ ಬೆಳಕನ್ನೇ ಕಾಣದಿರುವ ನಲ್ಲತಂಬಿ ಎಂಬ ರಿಕ್ಷಾ ಚಾಲಕ ಎಂಟುನೂರು ಜನರ ಸಂಗಾತಿ ಈತನ ರಿಕ್ಷಾಕ್ಕೆ ಲೈಟಿಲ್ಲ ಎಂಬ ಕಾರಣದ ಮೇಲೆ ಮೇ 15ರ ರಾತ್ರಿ ಈತನನ್ನು ಅಲ್ಲಿನ ಪೋಲೀಸ್ ಠಾಣೆಗೆ ಕರೆದೊಯ್ಯಲಾಯಿತು. ಲೈಟಿಲ್ಲದಿದ್ದರೆ ಸಂಬಂಧಪಟ್ಟ ರಿಕ್ಷಾ ಚಾಲಕನ ಮೇಲೆ ಕಾನೂನು ರೀತ್ಯ ಕೇಸು ಹಾಕುವುದು ಪೋಲೀಸರ ಕರ್ತವ್ಯ. ತಪ್ಪಿದ್ದರೆ, ನ್ಯಾಯಾಲಯದಲ್ಲಿ ಅದು ಸಾಬೀತಾದರೆ ದಂಡ ತೆರುತ್ತೇನೆಂಬ ಧೈರ್ಯದಿಂದ ನಲ್ಲತಂಬಿ ಪೋಲೀಸ್ ಠಾಣೆಗೆ ಸೈಬೀಸಿಕೊಂಡು ನಡೆದ. ಆದರೆ ಮಾರನೆಯ ದಿನ ಮಧ್ಯಾಹ್ನ ಹೊರ ಬಂದ ನಲ್ಲತಂಬಿಯ ಕೈಗಳು ನುಚ್ಚುನೂರಾಗಿದ್ದವು. ಈತನ ಬದುಕಿನ ಬವಣೆ ನೀಗುತ್ತಿದ್ದ ಕೈಗಳನ್ನು ಮುರಿದವರು ಕೈ ಕಾಂಗ್ರೆಸ್ ಆಡಳಿತದಡಿಯ ಪೋಲೀಸರು. ಇಂದಿರಾ ಕಾಂಗ್ರೆಸ್ ಆಡಳಿತದಡಿಯಲ್ಲಿ ಇದೇ ರೀತಿ ನೂರಾರು ರಿಕ್ಷಾ ಚಾಲಕರ ಬದುಕು ಮುರಿದಿದೆ ಎಂದು ನಮ್ಮ ಹೊಸಪೇಟೆಯ ವರದಿ ತಿಳಿಸಿದೆ.

ಸಿ.ಐ.ಟಿ.ಯು. ಉದಯ :

ನೊಂದ ಜನ ಯಾರನ್ನು ನಂಬಿಯೂ ಸುಮ್ಮನೆ ಕೂರುವುದಿಲ್ಲ. ಅಂತೆಯೇ ಹೊಸಪೇಟೆಯ ರಿಕ್ಷಾ ಚಾಲಕರು ಸುಮ್ಮನೆ ಕುಳಿತುಕೊಳ್ಳಲಿಲ್ಲ. ಎಚ್ಚರಗೊಂಡರು. ತಮ್ಮದೇ ಆದ ಸಂಘಟನೆಯ ಅವಶ್ಯಕತೆಯನ್ನು ಅರಿತರು. ದೇಶದುದ್ದಗಲಕ್ಕೂ ದುಡಿಯುವ ಜನತೆಯ ದುಃಖದುಮ್ಮಾನಗಳನ್ನು ತನ್ನದನ್ನಾಗಿಸಿಕೊಂಡಿರುವ ಸಿ. ಐ. ಟಿ. ಯು. ಕಾರ್ಮಿಕ ಸಂಘಟನೆ ಅವರ ಕಣ್ಣಿಗೆ ಕಂಡಿತು. ಸಿ. ಐ. ಟಿ. ಯು. ವನ್ನು ಸೇರಿಕೊಂಡರು–ತಮ್ಮದನ್ನಾಗಿಸಿಕೊಂಡರು. ತಮ್ಮ ಮೇಲಾಗುತ್ತಿರುವ ಪೋಲೀಸ್ ದೌರ್ಜನ್ಯದ ವಿರುದ್ಧ ಮೇ 19ರಂದು ಒಂದು ದಿನದ ಮುಷ್ಕರ ಹೂಡಿದರು. ಸಿ. ಐ. ಟಿ. ಯು. ವಿನ ಕೆಂಬಾವುಟಗಳನ್ನು ಹಿಡಿದುಕೊಂಡು ಹೊಸಪೇಟೆಯಲ್ಲಿ ಮೆರವಣಿಗೆ ನಡೆಸಿದರು. ಕಾಂಗ್ರೆ ಸರ್ಕಾರದ ಹಿಡಿತದಲ್ಲಿನ ಪೋಲೀಸ್ ದೌರ್ಜನ್ಯವನ್ನು ಕೂಗಿಕೂಗಿ ಹೇಳಿದರು- ಇತರೆ ದುಡಿಯುವ ಜನ ಸಮುದಾಯಕ್ಕೆ. "ಇಂದು ನಮ್ಮ ಕೈಗಳನ್ನು ಮುರಿದ ಕಾಂಗ್ರೆ ಸರ್ಕಾರದ ಪೋಲೀಸರು ನಾಳೆ ನಿಮ್ಮ ಕಾಲುಗಳನ್ನು ಮುರಿಯುತ್ತಾರೆ-ಜೀವ ತೆಗೆಯುತ್ತಾರೆ" ಎಂದು ದುಡಿಯುವ ಬಾಂಧವರನ್ನು ಎಚ್ಚರಿಸಿದರು. ಕೆಲಸ ಮಾಡುವ ಜನ ಹೇಳಿದ ಸತ್ಯವನ್ನು ಅರಿತ ಸಂಗಾತಿಗಳು, ವಿದ್ಯಾರ್ಥಿಗಳು, ಬುದ್ಧಿಜೀವಿಗಳು, ಕಾರ್ಮಿಕರು ಮತ್ತು ರೈತರು ಮೆರವಣಿಗೆಯಲ್ಲಿ ಸೇರಿಕೊಂಡರು. ಸಂಬಂಧಪಟ್ಟ ಅಧಿಕಾರಿಗಳಿಗೆ ಆಗಿರುವ ಅನ್ಯಾಯ ಸರಿಪಡಿಸಲು ಮನವಿ ಕೊಟ್ಟರು.

ನಗರ ಸಭೆಯವರು ರಿಕ್ಷಾ ನಿಲ್ದಾಣಗಳಿಗೆ ನಿರ್ಧಿಷ್ಟ ಜಾಗ ಗೊತ್ತುಪಡಿಸಿ ಅಗತ್ಯ ಸೌಲಭ್ಯ, ಕೊರಕಲು ಬಿದ್ದು ನಾಗರಿಕರಿಗೂ ತೊಂದರೆಯಾಗಿರುವ ಹೊಸಪೇಟೆ ರಸ್ತೆಗಳ ದುರಸ್ತಿ, ಹಗಲಿನಲ್ಲಿ ಮೂರು ರೂ. ಮತ್ತು ಇರುಳಿನಲ್ಲಿ 2 ರೂ. ರಿಕ್ಷಾ ಬಾಡಿಗೆ ನಿಗದಿ, ರಿಕ್ಷಾ ದೀಪಗಳನ್ನು ಮಾಲೀಕರೇ ಹಾಕಿಸಿ ಕೊಡುವುದು, ವಾರಕ್ಕೊಮ್ಮೆ ಸ್ವಂತ ದುಡಿಮೆಗೆ ರಿಕ್ಷಾ, ರಿಕ್ಷಾ ಚಾಲಕರಿಗೆ ರಾಷ್ಟ್ರೀಕೃತ ಬ್ಯಾಂಕುಗಳ ಸಾಲ ಸೌಲಭ್ಯ, ಮನೆಯಿಲ್ಲದ ರಿಕ್ಷಾ ಚಾಲಕರಿಗೆ ಸರ್ಕಾರದಿಂದ ಸಹಾಯ ಧನ, ನ್ಯಾಯಬೆಲೆ ಅಂಗಡಿಗಳ ಮೂಲಕ ಜೀವನಾವಶ್ಯಕ ವಸ್ತುಗಳ ವಿತರಣೆ ಮುಂತಾದುವು ರಿಕ್ಷಾ ಚಾಲಕರು ಸರ್ಕಾರದ ಮುಂದಿಟ್ಟಿರುವ ಬೇಡಿಕೆಗಳು. ನಲ್ಲತಂಬಿ ಎಂಬ ರಿಕ್ಷಾ ಚಾಲಕನ ಕೈ ಮುರಿದು ಹಾಕಿರುವ ಪೋಲೀಸ್ ಪೇದೆಯ ಮೇಲೆ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ಸಂಘದ ಪ್ರಮುಖ ಬೇಡಿಕೆಯಾಗಿದೆ.

ಹೊಸಪೇಟೆ ರಿಕ್ಷಾ ಚಾಲಕರ ಸಂಘಕ್ಕೆ ಸಂಚಾಲಕರಾಗಿ ಮ. ಜಂಬಯ್ಯನಾಯಕ ಅವರು ನೇಮಕಗೊಂಡಿದ್ದಾರೆ.

○

ದಲಿತ ಸಂಘರ್ಷ ಸಮಿತಿಯಿಂದ ಪ್ರತಿಭಟನಾ ಕಾರ್ಯಕ್ರಮ

ಹುಣಿಸೆಕೋಟೆ ಶೇಷಗಿರಿಯಪ್ಪನ ಕೊಲೆಮಾಡಿದವರ ಮೇಲೆ ಕ್ರಮ ತೆಗೆದುಕೊಳ್ಳುವಂತೆ ಒತ್ತಾಯಿಸಲು ಮತ್ತು ದಲಿತರ ಮೇಲಿನ ದಬ್ಬಾಳಿಕೆಗಳನ್ನು ಪ್ರತಿಭಟಿಸಲು ದಲಿತ ಸಂಘರ್ಷ ಸಮಿತಿಯು ಬೃಹತ್ ಪ್ರತಿಭಟನಾ ಕಾರ್ಯಕ್ರಮವನ್ನು ಹಾಕಿದೆ. ತಾರೀಖು 9 ರಂದು ಕೋಲಾರ ಜಿಲ್ಲೆಯ ಹುಣಿಸೆಕೋಟೆ-ಟೇಕಲ್ಲು ಎಂಬಲ್ಲಿಂದ ದಲಿತರ ಕಾಲ್ನಡೆ ಜಾತಾವು ಹೊರಟು 11ರಂದು ಸಂಜೆ ನಗರದ ಸಮೀಪದ ಕೃಷ್ಣರಾಜಪುರಕ್ಕೆ ಬರುವುದು. ಅಲ್ಲಿ ಅಂದು ಸಂಜೆ ಬಹಿರಂಗ ಸಭೆ ಇದೆ. 12ರಂದು ಮಧ್ಯಾಹ್ನ ನಗರವನ್ನು ತಲಪುವ ಜಾತಾವು ನಗರದ ಮುಖ್ಯ ಬೀದಿಗಳಲ್ಲಿ ಬೃಹತ್ ಮೆರವಣಿಗೆ ನಡೆಸಿ ವಿಧಾನ ಸೌಧದೆದುರು ಪ್ರತಿಭಟಿಸಲಿರುವುದು. ಅಂದು ಸಂಜೆ ಕಬ್ಬನ್‌ಪಾರ್ಕಿನಲ್ಲಿ ಬಹಿರಂಗಸಭೆ ನಡೆಯಲಿದೆ. ಈ ಜಾತಾದ ದಾರಿಯುದ್ದಕ್ಕೂ ಸಾಂಸ್ಕೃತಿಕ ತಂಡದವರಿಂದ ದಲಿತರ ಬವಣೆಗಳನ್ನು ಎತ್ತಿತೋರಿಸುವ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲಾಗುವುದು; ದಾರಿಯುದ್ದಕ್ಕೂ ಅಲ್ಲಲ್ಲಿ ಬಹಿರಂಗ ಸಭೆಗಳನ್ನು ನಡೆಸಲಾಗುವುದು. ಈ ಪ್ರತಿಭಟನಾ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಎಲ್ಲಾ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿ ಮತ್ತು ವ್ಯಕ್ತಿಗಳನ್ನು ವಿನಂತಿಸಲಾಗಿದೆ.

●

ಭೂಹೀನರಿಗೆ ಜಮೀನು ನೀಡಲಿ

ಶಿಡ್ಲಘಟ್ಟ ತಾಲ್ಲೂಕಿನ ವರದನಾಯಕನಹಳ್ಳಿಯ ಹರಿಜನ ಅಲ್ಪಸಂಖ್ಯಾತರಿಗೆ ಸರ್ಕಾರಿ ಬಂಜರು ಭೂಮಿ ನೀಡದೆ, ಅದೇ ಗ್ರಾಮದ ಶ್ರೀಮಂತ ರೈತನಿಗೆ ಸರ್ವೆ ನಂಬರ್ 5ರಲ್ಲಿ $7\frac{1}{2}$ ಎಕರೆ ಮಂಜೂರಾಗಿದೆ. ಬಡವರ ಅಹವಾಲನ್ನು ಕಡೆಗಣಿಸಿ ಶ್ರೀಮಂತನಿಗೆ ಭೂಮಿ ನೀಡಿರುವುದನ್ನು ಖಂಡಿಸಿರುವ ಕೋಲಾರ ಜಿಲ್ಲಾ ರೈತಸಂಘ ಸಮಿತಿ ಮತ್ತು ಅದರ ಕಾರ್ಯದರ್ಶಿ ಈ ಕ್ರಮವನ್ನು ಪ್ರತಿಭಟಿಸಿದ್ದಾರೆ.

●

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist) Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT